ಕರ್ನಾಟಕ ಸರ್ಕಾರ Government of Karnataka

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು

**Raichur Institute Of Medical Sciences, Raichur**

(ಸರ್ಕಾರದ ಸ್ವಾಯತ್ತ ಸಂಸ್ಥೆ) (Govt. Autonomous Institution)

ಹೈದ್ರಾಬಾದ್ ರೋಡ್, ರಾಯಚೂರು -584102 Hydrabad Road, Raichur -584102

Web. www.rims-raichur.com Phone/Fax-08532-238488/89 Email: info@rims-raichur.com

ದಿನಾಂಕ 13.11.2018 ರಂದು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಇವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ. 601, ಆರನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 14ನೇ ಹಣಕಾಸು ಸಮಿತಿ ಸಭೆಯ ಸಭಾ ನಡುವಳಿಗಳು

ಸಭೆಯಲ್ಲಿ ಹಾಜರಿದ್ದ ಸದಸ್ಯರು

1. ಶ್ರೀ. ವಿ.ಮಂಜುಲ, ಭಾ.ಆ.ಸೇ : ಅಧ್ಯಕ್ಷರು
   ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ), ಬೆಂಗಳೂರು
2. ಶ್ರೀ ಚಂದ್ರಶೇಖರ್, : ವಿಶೇಷ ಆಹ್ವಾನಿತರು
   ಸರ್ಕಾರದ ಉಪ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ),
   ಬೆಂಗಳೂರು
3. ಶ್ರೀ ಕೆ. ನಾರಾಯಣ್, : ಸದಸ್ಯರು
   ಸೀನಿಯರ್ ಡೈರಕ್ಟರ್, ಯೋಜನಾ ಇಲಾಖೆ
4. ಡಾ. ಕವಿತಾ ಪಾಟೀಲ್, : ಸದಸ್ಯರು
   ನಿರ್ದೇಶಕರು,
   ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
5. ಡಾ. ಸುರೇಶ್ ಸಗರದ್, : ಸದಸ್ಯರು
   ಪ್ರಭಾರಿ ವಿಶೇಷಾಧಿಕಾರಿಗಳು, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ,
   ರಾಯಚೂರು
6. ಡಾ. ರಮೇಶ್. ಬಿ.ಹೆಚ್, : ಸದಸ್ಯರು
   ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು
7. ಡಾ. ವಿಜಯಶಂಕರ್, : ಸದಸ್ಯರು
   ಜಿಲ್ಲಾ ಶಸ್ತ್ರಚಿಕಿತ್ಸಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು
8. ಡಾ. ವಾಸುದೇವ ಜಾಗೀರ್‌ದಾರ್ : ವಿಶೇಷ ಆಹ್ವಾನಿತರು
   ಸ್ಥಾನಿಕ ವೈದ್ಯಾಧಿಕಾರಿಗಳು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು

ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ ಸಭೆ ಇವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

Director
RIMS, Raichur

| ವಿಷಯ ಸೂಚಿ ಸಂಖ್ಯೆ – 01 : | ದಿನಾಂಕ 25.10.2017 ರಂದು ಜರುಗಿದ ರಿಮ್ಸ್ ಸಂಸ್ಥೆಯ 13ನೇ ಹಣಕಾಸು ಸಮಿತಿ ಸಭೆಯ ಸಭಾ ನಡಾವಳಿಗಳನ್ನು ಓದಿ ದಾಖಲಿಸುವ ಬಗ್ಗೆ. |
|---|---|

ದಿನಾಂಕ 25.10.2017 ರಂದು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 13ನೇ ಹಣಕಾಸು ಸಮಿತಿ ಸಭೆಯ ಅನುಪಾಲನಾ ವರದಿಯನ್ನು ಈ ಕೆಳಗಿನಂತೆ ಸಿದ್ಧಪಡಿಸಿ, ಆರ್ಥಿಕ ಸಮಿತಿ ಸಭೆಯ ಅನುಮೋದನೆಗೆ ಸಲ್ಲಿಸಿದೆ.

**ಸಭೆಯ ತೀರ್ಮಾನ :–**

ದಿನಾಂಕ 25.10.2017 ರಂದು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 13ನೇ ಹಣಕಾಸು ಸಮಿತಿ ಸಭೆಯ ಅನುಪಾಲನಾ ವರದಿಯನ್ನು ಈ ಕೆಳಕಂಡಂತೆ ಓದಿ ದಾಖಲಿಸಿ ಅನುಮೋದಿಸಲಾಯಿತು.

1) ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಬಾಕಿಯಿರುವ ಟೆಂಡರ್‌ಗಳನ್ನು ನಿಯಮಾನುಸಾರ ನವೆಂಬರ್ – 2018ರ ಅಂತ್ಯದೊಳಗೆ ಟೆಂಡರ್ ಅಧಿಸೂಚನೆಯನ್ನು ಹೊರಡಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

2) ಈಗಾಗಲೇ ಆಹ್ವಾನಿಸಿ ಪ್ರಗತಿಯಲ್ಲಿರುವ ಟೆಂಡರ್‌ಗಳನ್ನು ಪೂರ್ಣಗೊಳಿಸಬೇಕು.

3) ರಿಮ್ಸ್ ವೈದ್ಯಕೀಯ ಕಾಲೇಜು ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಕಾಮಗಾರಿಗಳು, ಉಪಕರಣ ಮತ್ತು ಪೀಠೋಪಕರಣ ಖರೀದಿಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಚುನಾವಣಾ ನೀತಿ ಸಂಹಿತೆ ಜಾರಿಯಾಗುವ ಪೂರ್ವದಲ್ಲಿ ಸಲ್ಲಿಸಿ ಅನುಮೋದನೆ ಪಡೆದುಕೊಳ್ಳುವಂತೆ ಸೂಚಿಸಲಾಯಿತು.

4) ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸಂಬಂಧಿಸಿದ ಉಪಕರಣಗಳನ್ನು ಖರೀದಿಸಲು ಅವಶ್ಯವಿರುವ ಸಂಬಂಧ ಪಟ್ಟ ವಿಭಾಗಗಳ ಉಪಕರಣಗಳ ಸ್ಪೆಷಿಫಿಕೇಶನ್‌ನ್ನು ಬೆಂಗಳೂರು ವೈದ್ಯಕೀಯ ಕಾಲೇಜಿನಿಂದ ಪಡೆದುಕೊಂಡು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

5) ರಿಮ್ಸ್ ಹಾಗೂ ಓಪೆಕ್ ಆಸ್ಪತ್ರೆಯಲ್ಲಿ ಓಟಿ ರಜೆಗಳನ್ನು ಜಾರಿಗೊಳಿಸಿರುವ ಬಗ್ಗೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರು ಆರ್ಥಿಕ ಸಮಿತಿ ಸಭೆಯ ಗಮನಕ್ಕೆ ತರಲಾಯಿತು.

6) ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಆರೋಗ್ಯ ಕರ್ನಾಟಕ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನವಾಗಿರುವ ಬಗ್ಗೆ ಅಂಕಿ ಅಂಶಗಳ ಮಾಹಿತಿಯನ್ನು ಆರ್ಥಿಕ ಸಮಿತಿ ಸಭೆಯ ಗಮನಕ್ಕೆ ಸಲ್ಲಿಸಲಾಯಿತು.

ರಿಮ್ಸ್ ಬೋಧಕ ಆಸ್ಪತ್ರೆ ವಿವರ :–

2ಎ – 481 – 391
2ಬಿ – 307 – 162
3ಎ – 581 – 1
4ಎ – 154 – 81

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವಿವರ :–

3ಎ – 581 - 122
4ಎ – 154 – 49

Director
RIMS, Raichur

| ವಿಷಯ ಸೂಚಿ ಸಂಖ್ಯೆ – 02 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ಲೆಕ್ಕ ಶಿರ್ಷಿಕೆ / ಖಾತೆಗಳ ಮಾಹಿತಿಯನ್ನು ಸಲ್ಲಿಸುವ ಬಗ್ಗೆ. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವಿವಿಧ ಲೆಕ್ಕ ಶಿರ್ಷಿಕೆ ಅಡಿಯಲ್ಲಿ ಸರ್ಕಾರದಿಂದ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಸರ್ಕಾರದ ಸುತ್ತೋಲೆ ಸಂಖ್ಯೆ ಆಕುಕ / 15 / ಎಂಎಸ್‌ಎಫ್ / 2018 ದಿನಾಂಕ 10.01.2018 ರನ್ವಯ ಜರುಗುವ ಆರ್ಥಿಕ ಸಮಿತಿ ಹಾಗೂ ಆಡಳಿತ ಮಂಡಳಿ ಸಭೆಗಳಲ್ಲಿ ಬ್ಯಾಂಕ್ ಖಾತೆಗಳ ವಿವರಗಳನ್ನು ಮಂಡಿಸುವಂತೆ ಸೂಚಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ ರಿಮ್ಸ್ ಸಂಸ್ಥೆಯ ಲೆಕ್ಕ ಶಿರ್ಷಿಕೆ / ಖಾತೆಗಳಲ್ಲಿ ದಿನಾಂಕ 06.11.2018 ಕ್ಕೆ ಬಡ್ಡಿ ಸೇರಿ ಲಭ್ಯವಿರುವ ಅನುದಾನದ ಮಾಹಿತಿ ಈ ಕೆಳಗಿನಂತಿರುತ್ತದೆ.

1) ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಲೆಕ್ಕ ಶಿರ್ಷಿಕೆ / ಖಾತೆಗಳ ವಿವರ

| Sl.No | Particulars | Account No. | Head of Account | Balance as on 06.11.2018 |
|---|---|---|---|---|
| 1 | Salary & OE | 62013028147 | 2210-05-105-1-54-101<br>2210-05-105-1-54-102<br>2210-05-105-1-54-103<br>2210-05-105-1-54-115 | 71,91,691/- |
| 2 | Civil Account | 62006895732 | 4210-03-10-1-02-386 | 19,81,31,595/- |
| 3 | SCP & STP Sub Plan Account | 62385751344 | 2210-05-105-1-54-422<br>2210-05-105-1-54-423<br>2210-01-110-2-37-422<br>2210-01-110-2-37-423<br>4210-03-10-1-02-422<br>4210-03-10-1-02-423 | 2,68,82,661/- |
| 4 | Equipment Account | 62094697678 | 4210-03-10-1-02-386 | 2,12,18,113/- |
| 5 | Building Maintenance | 62129977456 | | 4,35,55,412/- |
| 6 | EMD & RTI Account | 62003442491 | | 1,46,65,632/- |
| 7 | Tuition Fee Account | 62036768833 | | 3,73,97,664/- |
| 8 | Hostel Fee Account | 62036768877 | | 3,84,45,356/- |
| 9 | Para Medical Account | 62058752431 | | 9,71,147/- |
| 10 | Sports & Cultural Activity | 62282083154 | | 8,20,953/- |
| 11 | RIMS Donation Account | 62429576941 | | 4,26,476/- |
| 12 | RIMS Blood Bank | 62510122360 | | 37,32,990/- |
| 13 | User Charges | 62334775412 | | 4,14,51,572/- |

2) ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಲೆಕ್ಕ ಶಿರ್ಷಿಕೆ / ಖಾತೆಗಳ ವಿವರ

| Sl.No | Particulars | Account No. | Head of Account | B.as on 06.11.2018 |
|---|---|---|---|---|
| 1 | Miscellaneous Account | 62248955822 | 2210-01-110-2-37-101<br>2210-01-110-2-37-102<br>2210-01-110-2-37-103<br>2210-01-110-2-37-115 | 37,06,57,162/- |
| 2 | OPEC Hospital User Charges | 62458061212 | | 1,48,68,953/- |
| 3 | SAST / ARK Receipts (Arogya Raksha Karnataka ) | 62458060569 | | 92,12,719/- |

Director
RIMS, Raichur

**ಸಭೆಯ ತೀರ್ಮಾನ :-**

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿನ ವಿವಿಧ ಖಾತೆಗಳಲ್ಲಿ ಲಭ್ಯವಿರುವ ಅನುದಾನದ ಕುರಿತು ಆರ್ಥಿಕ ಸಮಿತಿ ಸಭೆಯು ಪರಿಶೀಲಿಸಲಾಯಿತು. ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆ ಅಡಿಯಲ್ಲಿ ಅನುದಾನ ಸಮರ್ಪಕವಾಗಿ ಬಳಕೆಯಾಗಿಲ್ಲವಾದ್ದರಿಂದ ಅದನ್ನು ಅದೇ ಯೋಜನೆಗೆ ಸದ್ಬಳಕೆ ಮಾಡುವಂತೆ ಸೂಚಿಸಲಾಯಿತು.

ಸರ್ಕಾರದ ಆದೇಶದಂತೆ ಹೊಸ ಬಳಕೆದಾರರ ಚಿಕಿತ್ಸಾ ಶುಲ್ಕಗಳನ್ನು ಕೂಡಲೇ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಅನುಷ್ಠಾನಗೊಳಿಸುವಂತೆ ಆರ್ಥಿಕ ಸಮಿತಿ ಸಭೆಯು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 03 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಬೋಧಕ ಆಸ್ಪತ್ರೆಯ ರೇಡಿಯಾಲಜಿ ವಿಭಾಗಕ್ಕೆ **Digital X-ray and PACS (Picture Archiving and Communication System** ಗಳನ್ನು ಪೂರೈಸಲು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಲು ಅನುಮತಿ ನೀಡುವ ಕುರಿತು. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದ್ದು, ಪ್ರತಿದಿನ 1000 ರಿಂದ 1200 ಹೊರ ರೋಗಿಗಳು ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ರಿಮ್ಸ್ ಬೋಧಕ ಆಸ್ಪತ್ರೆಗೆ ಬರುವ ರೋಗಿಗಳಿಗೆ ನಿಗದಿತ ಸಮಯದಲ್ಲಿ ಸ್ಕ್ಯಾನಿಂಗ್ ವರದಿಯನ್ನು ನೀಡಲು **Digital X-ray and PACS (Picture Archiving and Communication System)** ಮತ್ತು ಸದರಿ ಉಪಕರಣಗಳು ಇ – ಆಸ್ಪತ್ರೆ ಹಾಗೂ ಆರೋಗ್ಯ ಕರ್ನಾಟಕ ಅನುಷ್ಠಾನದ ಕಾರ್ಯಗಳಿಗೆ ಅವಶ್ಯಕತೆಯಿರುವುದರಿಂದ ಸದರಿ ಉಪಕರಣಗಳನ್ನು ಜರೂರಾಗಿ ಪೂರೈಸುವಂತೆ ಪ್ರಾಧ್ಯಾಪಕರು ಹಾಗು ವಿಭಾಗದ ಮುಖ್ಯಸ್ಥರು, ರೇಡಿಯಾಲಜಿ ವಿಭಾಗ ರಿಮ್ಸ್, ರಾಯಚೂರು ಇವರು ತಮ್ಮ ಮನವಿ ಪತ್ರವನ್ನು ರಿಮ್ಸ್ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವೈದ್ಯಕೀಯ ಪ್ರವೇಶಾತಿಯನ್ನು 100 ರಿಂದ 150ಕ್ಕೆ ಹೆಚ್ಚಿಸಲಾಗಿದ್ದು, ಇದರಿಂದ ರೋಗಿಗಳ ಸಂಖ್ಯೆಯಲ್ಲಿ ಸಹ ಗಣನೀಯವಾಗಿ ಏರಿಕೆಯಾಗುತ್ತಿದೆ. ಸದರಿ ಉಪಕರಣಗಳನ್ನು ಖರೀದಿಸಿ ಪೂರೈಸಲು ಅಂದಾಜು ರೂ. 95.00 ಲಕ್ಷಗಳ ವೆಚ್ಚವಾಗಲಿದೆ.

ಸರ್ಕಾರದ ಆದೇಶ ಸಂಖ್ಯೆ ಆಕುಕ / 465 / ಎಂಪಿಎಸ್ / 2018 ದಿನಾಂಕ 14.03.2018 ರನ್ವಯ ರಿಮ್ಸ್ ಸಂಸ್ಥೆಯ ವಿವಿಧ ವಿಭಾಗಗಳಿಗೆ ಉಪಕರಣಗಳನ್ನು ಖರೀದಿಸಿ ಪೂರೈಸುವ ಸಂಬಂಧವಾಗಿ ರೂ. 9,70,00,000/– ಗಳನ್ನು ಬಿಡುಗಡೆ ಮಾಡಲಾಗಿದ್ದು, ಅನುದಾನವು ಲಭ್ಯವಿರುತ್ತದೆ.

ರೇಡಿಯಾಲಜಿ ವಿಭಾಗಕ್ಕೆ ಖರೀದಿಸಬೇಕಾದ ಉಪಕರಣಗಳ ವಿವರ ಈ ಕೆಳಗಿನಂತಿದೆ.

| Sl.No. | Name of the Equipment | Required Qty | Approx. cost |
|---|---|---|---|
| 1 | Digital X-ray | 02 | 40,00,000/- |
| 2 | PACS (Picture Archiving & Communication System) [reporting system – 03 Viewing system – 15 ] | 01 | 55,00,000/- |
| | Total | | 95,00,000/- |



Director
RIMS, Raichur

ಕಾರಣ ರೇಡಿಯಾಲಜಿ ವಿಭಾಗಗಕ್ಕೆ ಅವಶ್ಯವಿರುವ **Digital X-ray and PACS (Picture Archiving and Communication System** ಉಪಕರಣಗಳನ್ನು ಖರೀದಿಸಲು ಕೆಟಿಪಿಪಿ ಕಾಯ್ದೆಯನ್ವಯ 30 ದಿನಗಳ ಕಾಲವಕಾಶ ನೀಡಿ ನಿಯಮಾನುಸಾರ ಟೆಂಡರ್ ಆಹ್ವಾನಿಸಲು ಹಾಗೂ ಈ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ ಆಕುಕ / 465 / ಎಂಪಿಎಸ್ / 2018 ದಿನಾಂಕ 14.03.2018 ರನ್ವಯ ಬಿಡುಗಡೆ ಮಾಡಲಾದ ಅನುದಾನದಿಂದ ಭರಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :-**

ರೇಡಿಯಾಲಜಿ ವಿಭಾಗಗಕ್ಕೆ ಅವಶ್ಯವಿರುವ **Digital X-ray and PACS (Picture Archiving and Communication System** ಉಪಕರಣಗಳನ್ನು ನಿಯಮಾನುಸಾರ ಕೆಟಿಪಿಪಿ ಕಾಯ್ದೆಯನ್ವಯ 30 ದಿನಗಳ ಕಾಲವಕಾಶ ನೀಡಿ ಟೆಂಡರ್ ಆಹ್ವಾನಿಸಲು ಹಾಗೂ ಇದಕ್ಕೆ ತಗುಲುವ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ ಆಕುಕ / 465 / ಎಂಪಿಎಸ್ / 2018 ದಿನಾಂಕ 14.03.2018 ರನ್ವಯ ಬಿಡುಗಡೆ ಮಾಡಲಾದ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು. ಸದರಿ ಟೆಂಡರ್ ಅಧಿಸೂಚನೆಯನ್ನು ನವಂಬರ್ – 2018 ರ ಅಂತ್ಯದೊಳಗೆ ಹೊರಡಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 04 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಎಂಬಿಬಿಎಸ್ ಪ್ರವೇಶಾತಿಯನ್ನು 100 ರಿಂದ 150ಕ್ಕೆ ಹೆಚ್ಚಿಸಲಾಗಿದ್ದು ಹಾಗೂ ಸ್ನಾತಕೋತ್ತರ ಪ್ರವೇಶಾತಿ ಪಡೆಯಲು ಇ.ಎನ್.ಟಿ. ವಿಭಾಗಕ್ಕೆ ಅತಿ ಜರೂರಾಗಿ ಉಪಕರಣಗಳನ್ನು ಪೂರೈಸುವ ಸಂಬಂಧ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಲು ಅನುಮತಿ ನೀಡುವ ಕುರಿತು. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಎಂಬಿಬಿಎಸ್ ಪ್ರವೇಶಾತಿಯನ್ನು 100 ರಿಂದ 150ಕ್ಕೆ ಹೆಚ್ಚಿಸಲಾಗಿದ್ದು, ಹಾಗೂ ಇಎನ್‌ಟಿ ವಿಭಾಗದ ಸ್ನಾತಕೋತ್ತರ ಪ್ರವೇಶಾತಿಯನ್ನು ಪಡೆಯಲು ನಿಯಮಾನುಸಾರ ಇಎನ್‌ಟಿ ವಿಭಾಗಕ್ಕೆ ಅತಿ ಜರೂರಾಗಿ ಉಪಕರಣಗಳನ್ನು ಪೂರೈಸುವಂತೆ ಇಎನ್‌ಟಿ ವಿಭಾಗದ ಪ್ರಾಧ್ಯಾಪಕರು ಹಾಗು ವಿಭಾಗದ ಮುಖ್ಯಸ್ಥರು, ಇಎನ್‌ಟಿ ವಿಭಾಗ, ರಿಮ್ಸ್, ರಾಯಚೂರು ಇವರು ತಮ್ಮ ಮನವಿ ಪತ್ರದಲ್ಲಿ ಕೋರಿರುತ್ತಾರೆ. ಸದರಿ ವಿಭಾಗಗಕ್ಕೆ ಉಪಕರಣಗಳನ್ನು ನಿಯಾಮಾನುಸಾರ ಖರೀದಿಸಿ ಪೂರೈಸಲು ಅಂದಾಜು ರೂ. 266.00 ಲಕ್ಷಗಳ ವೆಚ್ಚವಾಗಲಿದೆ.

ಸರ್ಕಾರದ ಆದೇಶ ಸಂಖ್ಯೆ ಆಕುಕ / 465 / ಎಂಪಿಎಸ್ / 2018 ದಿನಾಂಕ 14.03.2018 ರನ್ವಯ ರಿಮ್ಸ್ ಸಂಸ್ಥೆಯ ವಿವಿಧ ವಿಭಾಗಗಳಿಗೆ ಉಪಕರಣಗಳನ್ನು ಖರೀದಿಸಿ ಪೂರೈಸುವ ಸಂಬಂಧವಾಗಿ ರೂ. 9,70,00,000/– ಗಳನ್ನು ಬಿಡುಗಡೆ ಮಾಡಲಾಗಿದ್ದು, ಅನುದಾನವು ಲಭ್ಯವಿರುತ್ತದೆ.

ಇಎನ್‌ಟಿ ವಿಭಾಗಗಕ್ಕೆ ಅವಶ್ಯವಿರುವ ಉಪಕರಣಗಳ ವಿವರ ಈ ಕೆಳಗಿನಂತಿದೆ.

| Sl.No. | Name of the Equipment | Required Qty | Approx. cost |
|---|---|---|---|
| 1 | ENT operating Microscope with camera and accessories | 01 set | 40,00,000/- |
| 2 | ENT operating microscope (TWO) with integrated camera with accessories | 01set | 32,00,000/- |
| 3 | FESS – Endoscopes with accessories Camera with accessories, FESS Instruments | 01 Set | 58,00,000/- |
| 4 | Console for micro debriderconsole | 01 set | 32,00,000/- |



Director
RIMS, Raichur

| | | | |
|---|---|---|---|
| 5 | Adult rigid ventilating broncoscopes peadiatric | 01 set | 20,00,000/- |
| 6 | Facial nerve monitoring | 01 set | 20,00,000/- |
| 7 | ENT Head light | 01 | 3,00,000/- |
| 8 | Video Nystagmography | 01 | 10,00,000/- |
| 9 | Coblator with wands | 01 | 12,00,000/- |
| 10 | Electro – cautery with accessories | 01 | 12,00,000/- |
| 11 | Flexible Nasopharyngoscope | 01 | 7,00,000/- |
| 12 | Flexible Paediatric adult bronchoscope | 01 | 14,00,000/- |
| 13 | Instruments 2 sets each – tympanoplasty, Mastoidectomy, septoplasty, tonsillectomy, FESS | 01 | 6,00,000/- |
| | Total | | 2,66,00,000/- |

ಕಾರಣ ಇಎನ್‌ಟಿ ವಿಭಾಗಗಕ್ಕೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು ಕೆಟಿಪಿಪಿ ಕಾಯ್ದೆಯನ್ವಯ 30 ದಿನಗಳ ಕಾಲವಕಾಶ ನೀಡಿ ನಿಯಮಾನುಸಾರ ಟೆಂಡರ್ ಆಹ್ವಾನಿಸಲು ಹಾಗೂ ಈ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ ಆಕುಕ / 465 / ಎಂಪಿಎಸ್ / 2018 ದಿನಾಂಕ 14.03.2018 ರನ್ವಯ ಬಿಡುಗಡೆ ಮಾಡಲಾದ ಅನುದಾನದಿಂದ ಭರಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :–**

ರಿಮ್ಸ್ ಸಂಸ್ಥೆಯ ಇಎನ್‌ಟಿ ವಿಭಾಗಗಕ್ಕೆ ಅವಶ್ಯವಿರುವ ಒಟ್ಟು 13 ವಿವಿಧ ಉಪಕರಣಗಳ ಪಟ್ಟಿಯನ್ನು ಆರ್ಥಿಕ ಸಮಿತಿಯು ಪರಿಶೀಲಿಸಲಾಯಿತು. ಹಾಗೂ ಸದರಿ ಉಪಕರಣಗಳನ್ನು ಖರೀದಿಸಲು ನಿಯಮಾನುಸಾರ ಕೆಟಿಪಿಪಿ ಕಾಯ್ದೆಯನ್ವಯ ಉಪಕರಣಗಳ ಖರೀದಿಯ ಮೌಲ್ಯ 266.00 ಲಕ್ಷಗಳಿರುವುದರಿಂದ 60 ದಿನಗಳ ಕಾಲವಕಾಶ ನೀಡಿ ಟೆಂಡರ್ ಆಹ್ವಾನಿಸಲು ಹಾಗೂ ಇದಕ್ಕೆ ತಗುಲುವ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ ಆಕುಕ / 465 / ಎಂಪಿಎಸ್ / 2018 ದಿನಾಂಕ 14.03.2018 ರನ್ವಯ ಬಿಡುಗಡೆ ಮಾಡಲಾದ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು. ಸದರಿ ಟೆಂಡರ್ ಅಧಿಸೂಚನೆಯನ್ನು ನವಂಬರ್ – 2018ರ ಅಂತ್ಯದೊಳಗೆ ಹೊರಡಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 05 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ 2018–19ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪದವಿ ಮತ್ತು ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳಿಗೆ ವೈದ್ಯಕೀಯ ಪುಸ್ತಕಗಳನ್ನು ಪೂರೈಸುವ ಸಂಬಂಧ ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಲು ಅನುಮತಿ ನೀಡುವ ಬಗ್ಗೆ. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ 2018–19ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪದವಿ ಮತ್ತು ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಪೂರೈಸುವಂತೆ ಗ್ರಂಥಪಾಲಕರು ಮನವಿಯಲ್ಲಿ ಕೋರಿರುತ್ತಾರೆ.

ರಿಮ್ಸ್ ಸಂಸ್ಥೆಯಲ್ಲಿ 2018–19ನೇ ಸಾಲಿನಲ್ಲಿ ಒಟ್ಟು 103 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, 103 ವಿದ್ಯಾರ್ಥಿಗಳಿಗೆ ವೈದ್ಯಕೀಯ ಪುಸ್ತಕಗಳನ್ನು ಪೂರೈಸಬೇಕಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ ಆಕುಕ / 291 / ಎಂಎಂಇ / 2017 (ಭಾಗ – 2) ದಿನಾಂಕ 07.08.2018 ರನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವೈದ್ಯಕೀಯ ಪುಸ್ತಕಗಳನ್ನು ಒದಗಿಸಲು ಅನುಮತಿಯನ್ನು ನೀಡಿ, ಪರಿಶಿಷ್ಟ ಜಾತಿ ಉಪ ಯೋಜನೆ ಅಡಿಯಲ್ಲಿ ರೂ. 6,25,000/– ಗಳನ್ನು ಹಾಗೂ ಪರಿಶಿಷ್ಟ ಪಂಗಡ ಉಪ ಯೋಜನೆ ಅಡಿಯಲ್ಲಿ ರೂ. 4,50,000/– ಗಳನ್ನು ಸೇರಿ ಒಟ್ಟು ರೂ. 10,75,000/– ಗಳನ್ನು ವಿವಿಧ ಉದ್ದೇಶಗಳಿಗಾಗಿ ಮೊದಲನೇ ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.



Director
RIMS, Raichur

ಕಾರಣ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯು.ಜಿ ಮತ್ತು ಪಿ.ಜಿ ವಿದ್ಯಾರ್ಥಿಗಳಿಗೆ ವೈದ್ಯಕೀಯ ಖರೀದಿಸಲು ಪುಸ್ತಕಗಳನ್ನು ಖರೀದಿಸಿ ಪೂರೈಸಲು 30 ದಿನಗಳ ಕಾಲವಕಾಶ ಟೆಂಡರ್ ಆಹ್ವಾನಿಸಲು ಹಾಗೂ ರೂ. 18,10,000/- ಗಳ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ ಆಕುಕ / 291 / ಎಂಎಂಇ / 2017 (ಭಾಗ – 2) ದಿನಾಂಕ 07.08.2018 ರನ್ವಯ ಬಿಡುಗಡೆ ಮಾಡಲಾದ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :-**

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ 2018-2019 ನೇ ಸಾಲಿಗೆ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯು.ಜಿ ಮತ್ತು ಪಿ.ಜಿ ವಿದ್ಯಾರ್ಥಿಗಳಿಗೆ ವೈದ್ಯಕೀಯ ಖರೀದಿಸಲು ಪುಸ್ತಕಗಳನ್ನು ಖರೀದಿಸಿ ಪೂರೈಸಲು 30 ದಿನಗಳ ಕಾಲವಕಾಶ ನೀಡಿ ಟೆಂಡರ್ ಆಹ್ವಾನಿಸಲು ಹಾಗೂ ಇದಕ್ಕೆ ತಗುಲುವ ಅಂದಾಜು ರೂ. 18,10,000/- ಗಳ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ ಆಕುಕ / 291 / ಎಂಎಂಇ / 2017 (ಭಾಗ – 2) ದಿನಾಂಕ 07.08.2018 ರನ್ವಯ ಬಿಡುಗಡೆ ಮಾಡಲಾದ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು. ಸದರಿ ಟೆಂಡರ್ ಅಧಿಸೂಚನೆಯನ್ನು ನವಂಬರ್ – 2018ರ ಅಂತ್ಯದೊಳಗೆ ಹೊರಡಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 06 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಶಸ್ತ್ರ ಚಿಕಿತ್ಸಾ ವಿಭಾಗಕ್ಕೆ ಅತಿ ಜರೂರಾಗಿ ಉಪಕರಣಗಳನ್ನು ಪೂರೈಸುವ ಸಂಬಂಧ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಲು ಅನುಮತಿ ನೀಡುವ ಕುರಿತು. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಶಸ್ತ್ರಚಿಕಿತ್ಸಾ ವಿಭಾಗಕ್ಕೆ ಅವಶ್ಯವಿರುವ ಈ ಕೆಳಕಂಡ ಉಪಕರಣಗಳನ್ನು ಜರೂರಾಗಿ ಪೂರೈಸುವಂತೆ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ಶಸ್ತ್ರಚಿಕಿತ್ಸಾ ವಿಭಾಗ, ರಿಮ್ಸ್, ರಾಯಚೂರು ಇವರು ತಮ್ಮ ಮನವಿ ಪತ್ರದಲ್ಲಿ ತಿಳಿಸಿರುತ್ತಾರೆ.

| Sl.No. | Name of the Equipment | Quantity | Approx. Cost |
|---|---|---|---|
| 1 | Duodeno Video Scope set with accessories | 01 | 23,42,102/- |
| 2 | Endomech Products (Endo Staplers) Set | 01 | 1,35,847/- |
| 3 | Generator with Harmonic and Enseal | 01 | 20,78,000/- |
| 4 | Force Diathermy | 01 | 5,04,000/- |
| 5 | C-Arm for surgery | 01 | 39,20,000/- |
| 6 | Laparoscopic and Instruments Set | 01 | 1,47,224/- |
| | | Total | 91,27,173/- |

ಸರ್ಕಾರದ ಆದೇಶ ಸಂಖ್ಯೆ ಆಕುಕ / 465 / ಎಂಪಿಎಸ್ / 2018 ದಿನಾಂಕ 14.03.2018 ರನ್ವಯ ರಿಮ್ಸ್ ಸಂಸ್ಥೆಯ ವಿವಿಧ ವಿಭಾಗಗಳಿಗೆ ಉಪಕರಣಗಳನ್ನು ಖರೀದಿಸಿ ಪೂರೈಸುವ ಸಂಬಂಧವಾಗಿ ರೂ. 9,70,00,000/- ಗಳನ್ನು ಬಿಡುಗಡೆ ಮಾಡಲಾಗಿದ್ದು, ಅನುದಾನವು ಲಭ್ಯವಿರುತ್ತದೆ.

ಕಾರಣ ರಿಮ್ಸ್ ಬೋಧಕ ಆಸ್ಪತ್ರೆಯ ಶಸ್ತ್ರ ಚಿಕಿತ್ಸಾ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು ಕೆಟಿಪಿಪಿ ಕಾಯ್ದೆಯನ್ವಯ 30 ದಿನಗಳ ಕಾಲವಕಾಶ ನೀಡಿ ಟೆಂಡರ್ ಆಹ್ವಾನಿಸಲು ಹಾಗೂ ರೂ. 91,27,173/- ಗಳ ಅಂದಾಜು ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ ಆಕುಕ / 465 / ಎಂಪಿಎಸ್ / 2018 ದಿನಾಂಕ 14.03.2018 ರನ್ವಯ ಬಿಡುಗಡೆ ಮಾಡಲಾದ ಅನುದಾನದಿಂದ ಭರಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

Director
RIMS, Raichur

**ಸಭೆಯ ತೀರ್ಮಾನ :-**

ರಿಮ್ಸ್ ಬೋಧಕ ಆಸ್ಪತ್ರೆಯ ಶಸ್ತ್ರ ಚಿಕಿತ್ಸಾ ವಿಭಾಗಗಕ್ಕೆ ಅವಶ್ಯವಿರುವ ವಿವಿಧ 06 ಉಪಕರಣಗಳನ್ನು ಖರೀದಿಸಲು ಕೆಟಿಪಿಪಿ ಕಾಯ್ದೆಯನ್ವಯ 30 ದಿನಗಳ ಕಾಲಾವಕಾಶ ನೀಡಿ ಟೆಂಡರ್ ಆಹ್ವಾನಿಸಲು ಹಾಗೂ ಇದಕ್ಕೆ ತಗುಲುವ ಅಂದಾಜು ವೆಚ್ಚ ರೂ. 91,27,173/- ಗಳನ್ನು ಸರ್ಕಾರದ ಆದೇಶ ಸಂಖ್ಯೆ. ಆಕುಕ / 465 / ಎಂಪಿಎಸ್ / 2018 ದಿನಾಂಕ 14.03.2018 ರನ್ವಯ ಬಿಡುಗಡೆ ಮಾಡಲಾದ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು. ಸದರಿ ಟೆಂಡರ್ ಅಧಿಸೂಚನೆಯನ್ನು ನವಂಬರ್ – 2018ರ ಅಂತ್ಯದೊಳಗೆ ಹೊರಡಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

| ವಿಷಯ ಸೂಚಿ ಸಂಖ್ಯೆ – 07 | ರಿಮ್ಸ್ ಬೋಧಕ ಆಸ್ಪತ್ರೆಗೆ **Advanced Life Support Ambulance (ALS)** ಪೂರೈಸುವ ಸಂಬಂಧ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಲು ಅನುಮತಿ ನೀಡುವ ಕುರಿತು. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಪ್ರಸ್ತುತ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಒಟ್ಟು 04 ಅಂಬುಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಹಳೆಯ ಮತ್ತು ಸಾಧಾರಣ ಅಂಬ್ಯೂಲೆನ್ಸ್‌ಗಳಾಗಿರುತ್ತವೆ. ಆದರೆ ಸದರಿ 04 ಅಂಬ್ಯೂಲೆನ್ಸ್‌ಗಳಲ್ಲಿ **Advance life support equipment** ಗಳ ಸೌಲಭ್ಯ ಇರುವುದಿಲ್ಲ. ಹಾಗೂ ಬಹಳ ಆದ್ದರಿಂದ ತುರ್ತು ಚಿಕಿತ್ಸಾ ಸಂದರ್ಭದಲ್ಲಿ ರೋಗಿಗಳನ್ನು ಆಸ್ಪತ್ರೆಗೆ ಸಾಗಿಸುವ ವೇಳೆಯಲ್ಲಿ ರೋಗಿಗಳ ಜೀವಕ್ಕೆ ಯಾವುದೇ ರೀತಿ ತೊಂದರೆಯಾಗದಂತೆ ಅತ್ಯಾಧುನಿಕ ಉಪಕರಣವನ್ನೊಳಗೊಂಡ ಒಟ್ಟು 02 **Advanced Life Support Ambulance (ALS)** ಗಳನ್ನು ಖರೀದಿಸುವುದು ತುಂಬಾ ಅವಶ್ಯಕತೆ ಇರುತ್ತದೆ.

ಸರ್ಕಾರದ ಆದೇಶ ಸಂಖ್ಯೆ. ಆಕುಕ / 465 / ಎಂಪಿಎಸ್ / 2018 ದಿನಾಂಕ 14.03.2018 ರನ್ವಯ ರಿಮ್ಸ್ ಸಂಸ್ಥೆಯ ವಿವಿಧ ವಿಭಾಗಗಳಿಗೆ ಉಪಕರಣಗಳನ್ನು ಖರೀದಿಸಿ ಪೂರೈಸುವ ಸಂಬಂಧವಾಗಿ ರೂ. 9,70,00,000/- ಗಳನ್ನು ಬಿಡುಗಡೆ ಮಾಡಲಾಗಿದ್ದು, ಅನುದಾನವು ಲಭ್ಯವಿರುತ್ತದೆ.

| Sl.No. | Name of the Vehicle | Qty | Rate (Each) | Total |
|---|---|---|---|---|
| 1 | Advanced Life Support Ambulance (ALS) | 02 | 25,00,000/- | 50,00,000/- |

ಕಾರಣ ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ **Advanced Life Support Ambulance (ALS)** ಗಳನ್ನು ಖರೀದಿಸಲು ಕೆಟಿಪಿಪಿ ಕಾಯ್ದೆಯನ್ವಯ 30 ದಿನಗಳ ಕಾಲವಕಾಶ ನೀಡಿ ಟೆಂಡರ್ ಆಹ್ವಾನಿಸಲು ಹಾಗೂ ರೂ. 50,00,000/- ಗಳ ಅಂದಾಜು ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ. ಆಕುಕ / 465 / ಎಂಪಿಎಸ್ / 2018 ದಿನಾಂಕ 14.03.2018 ರನ್ವಯ ಬಿಡುಗಡೆ ಮಾಡಲಾದ ಅನುದಾನದಿಂದ ಭರಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :-**

ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ 02 **Advanced Life Support Ambulance (ALS)** ಗಳನ್ನು ನಿಯಮಾನುಸಾರ ಖರೀದಿಸಲು ಪ್ರಸ್ತಾವನೆಯನ್ನು ಮತ್ತೊಮ್ಮೆ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಸಲ್ಲಿಸಲು ಆರ್ಥಿಕ ಸಮಿತಿ ಸಭೆಯು ಸೂಚಿಸಲಾಯಿತು. ವಿಳಂಬವಾದಲ್ಲಿ ನಿಯಮಾನುಸಾರ ಟೆಂಡರ್ ಕರೆದು ಅಂಬ್ಯೂಲೆನ್ಸ್ ವಾಹನಗಳನ್ನು ಖರೀದಿಸಲು ಅನುಮೋದಿಸಲಾಯಿತು. ಹಾಗು ಈ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ. ಆಕುಕ / 465 / ಎಂಪಿಎಸ್ / 2018 ದಿನಾಂಕ 14.03.2018 ರನ್ವಯ ಬಿಡುಗಡೆ ಮಾಡಲಾದ ಅನುದಾನದಿಂದ ಭರಿಸಲು ತೀರ್ಮಾನಿಸಲಾಯಿತು.



Director
RIMS, Raichur

| ವಿಷಯ ಸೂಚಿ ಸಂಖ್ಯೆ – 08 | ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಸಿಎಸ್‌ಎಸ್‌ಡಿ (Central Sterile Surgical Department) ಸ್ಥಾಪಿಸುವ ಅವಶ್ಯವಿರುವ ಉಪಕರಣಗಳನ್ನು ನಿಯಮಾನುಸಾರ ಖರೀದಿಸಲು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಲು ಅನುಮತಿ ನೀಡುವ ಕುರಿತು. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವೈದ್ಯಕೀಯ ಸೀಟುಗಳನ್ನು 100 ರಿಂದ 150 ಕ್ಕೆ ಹೆಚ್ಚಿಸಿರುವುದರಿಂದ ಬೋಧಕ ಆಸ್ಪತ್ರೆಯ ಹಾಸಿಗೆಗಳ 650 ಹಾಸಿಗೆಗಳ ಸಾಮರ್ಥ್ಯವನ್ನು ಹೊಂದಿರುತ್ತದೆ. ಪ್ರತಿ ನಿತ್ಯ ರಿಮ್ಸ್ ಬೋಧಕ ಆಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆ 1000 ರಿಂದ 1200 ಆಗಿರುತ್ತದೆ. ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಸಿಎಸ್‌ಎಸ್‌ಡಿ ಅಳವಡಿಸಲು ಸಂಸ್ಥೆಯ ವೈದ್ಯರೊನ್ನೊಳಗೊಂಡ ತಜ್ಞರ ಸಮಿತಿಯೊಂದನ್ನು ರಚಿಸಲಾಗಿದ್ದು, ಸಮಿತಿಯು ವಿವಿಧ ವೈದ್ಯಕೀಯ ಕಾಲೇಜುಗಳಿಗೆ ಭೇಟಿ ನೀಡಿ, ರಿಮ್ಸ್ ಬೋಧಕ ಆಸ್ಪತ್ರೆಗೆ ಅತ್ಯಾಧುನಿಕವಾಗಿ ಸಿಎಸ್‌ಎಸ್‌ಡಿ ಅಳವಡಿಸಲು ರೂಪುರೇಷಗಳನ್ನು ಸಿದ್ದಪಡಿಸಿ ರಿಮ್ಸ್ ಕಾರ್ಯಲಯಕ್ಕೆ ಸಲ್ಲಿಸಿರುತ್ತಾರೆ.

ಸಮಿತಿಯ ಶಿಫಾರಸ್ಸಿನನ್ವಯ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಸಿಎಸ್‌ಎಸ್‌ಡಿ ಅಳವಡಿಸಲು ಸಿವಿಲ್ ಕಾಮಗಾರಿಯೊಂದಿಗೆ ಅವಶ್ಯಕ ಉಪಕರಣಗಳನ್ನು ಖರೀದಿಸಿ ಪೂರೈಸಬೇಕಾಗಿರುತ್ತದೆ. ಅತ್ಯಾಧುನಿಕ ಸಿ.ಎಸ್.ಎಸ್.ಡಿ ಉಪಕರಗಳನ್ನು ಖರೀದಿಸಿ ಅಳವಡಿಸಲು ಅಂದಾಜು ರೂ.450.00 ಲಕ್ಷಗಳಾಗಲಿದೆ ಎಂದು ಸಮಿತಿಯು ವರದಿಯನ್ನು ನೀಡಿರುತ್ತದೆ.

ಉಪಕರಣಗಳ ವಿವರ ಈ ಕೆಳಗಿನಂತಿದೆ.

| Sl.No. | Name of the Equipment | Qty |
|---|---|---|
| 1 | High Pressure Autoclave | 03 |
| 2 | 100% ETO Sterilizer | 02 |
| 3 | Plasma Sterilizer (70 - 100 liter) | 01 |
| 4 | Washer Disinfector | 02 |
| 5 | Ultrasonic Cleaner (45 Liters) | 02 |
| 6 | Sealing Machine | 01 |
| 7 | Laundry | |
| | 1. Washing Machine – 60 Kgs | 02 |
| | 2. Washing Machine – 30 Kgs | 01 |
| | 3. Hydro Extractor - 30 Kgs | 02 |
| | 4. Tumble Dryers 40 – 50 Kg | 02 |
| | 5. Flat work ironer 400 mm x 2100 mm | 01 |
| | 6. HEPA Filter System for Storage area | |
| | 7. Vaccum ironing table 130 x 50 cms | 01 |
| | 8. Electrical Steam Boiler | 02 |
| | 9. Gauze cutting machine | 01 |

ಕಾರಣ ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಸಿಎಸ್‌ಎಸ್‌ಡಿ (Central Sterile Surgical Department) ಉಪಕರಣಗಳನ್ನು ಖರೀದಿಸಲು ಕೆಟಿಪಿಪಿ ಕಾಯ್ದೆಯನ್ವಯ 30 ದಿನಗಳ ಕಾಲವಕಾಶ ನೀಡಿ ಟೆಂಡರ್ ಆಹ್ವಾನಿಸಲು ಹಾಗೂ ರೂ. 450.00 ಗಳ ಅಂದಾಜು ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ ಆಕುಕ / 465 / ಎಂಪಿಎಸ್ / 2018 ದಿನಾಂಕ 14.03.2018 ರನ್ವಯ ಬಿಡುಗಡೆ ಮಾಡಲಾದ ಅನುದಾನದಿಂದ ಭರಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

Director
RIMS, Raichur

**ಸಭೆಯ ತೀರ್ಮಾನ :-**

ರಿಮ್ಸ್ ಬೋಧಕ ಆಸ್ಪತ್ರೆಯ ಸಿ.ಎಸ್.ಎಸ್.ಡಿ (Central Sterile Surgical Department) ಯೂನಿಟ್‌ಗೆ ಅವಶ್ಯವಿರುವ ಉಪಕರಣಗಳನ್ನು ನಿಯಮಾನುಸಾರ ಖರೀದಿಸುವ ಬಗ್ಗೆ ಮಾಹಿತಿಯನ್ನು ಜಯದೇವ ಹೃದ್ರೋಗ ಸಂಸ್ಥೆ, ಗುಲ್ಬರ್ಗಾ ಇವರಿಂದ ಪಡೆದು ರಿಮ್ಸ್ ಬೋದಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅನುಕೂಲವಾಗುವಂತೆ ಒಂದೇ ಸಿ.ಎಸ್.ಎಸ್.ಡಿ ಯೂನಿಟ್‌ನ್ನು ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 09 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಬೋಧಕ ಆಸ್ಪತ್ರೆಯ ರೇಡಿಯಾಲಜಿ ವಿಭಾಗಕ್ಕೆ **High End USG Machine** ಪೂರೈಸುವ ಸಂಬಂಧ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಲು ಅನುಮತಿ ನೀಡುವ ಕುರಿತು. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆ ಹೆಚ್ಚಿದ್ದು ಪ್ರತಿದಿನ 1000 ರಿಂದ 1200 ಹೊರ ರೋಗಿಗಳು ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ರಿಮ್ಸ್ ಬೋಧಕ ಆಸ್ಪತ್ರೆಗೆ ಬರುವ ರೋಗಿಗಳಿಗೆ ನಿಗದಿತ ಸಮಯದಲ್ಲಿ ಸ್ಕ್ಯಾನಿಂಗ್ ವರದಿಯನ್ನು ನೀಡಲು **High End USG Equipment** ಗಳನ್ನು ಪೂರೈಸುವಂತೆ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ರೇಡಿಯಾಲಜಿ ವಿಭಾಗದ ಮುಖ್ಯಸ್ಥರು ಕೋರಿರುತ್ತಾರೆ.

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯು ಎಂಬಿಬಿಎಸ್ ಪ್ರವೇಶಾತಿಯನ್ನು 100 ರಿಂದ 150ಕ್ಕೆ ಹೆಚ್ಚಿಸಲಾಗಿದ್ದು, ಇದರಿಂದ ರೋಗಿಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆಯಾಗಿರುತ್ತದೆ. ವಿಭಾಗದ ಮುಖ್ಯಸ್ಥರ ಬೇಡಿಕೆಯನ್ವಯ ಈ ಕೆಳಗಿನ ಉಪಕರಣಗಳನ್ನು ಖರೀದಿಸಿ ಪೂರೈಸಲು ಅಂದಾಜು ರೂ. 30.00 ಲಕ್ಷಗಳ ವೆಚ್ಚವಾಗಲಿದೆ.

ಸರ್ಕಾರದ ಆದೇಶ ಸಂಖ್ಯೆ ಆಕುಕ / 465 / ಎಂಪಿಎಸ್ / 2018 ದಿನಾಂಕ 14.03.2018 ರನ್ವಯ ರಿಮ್ಸ್ ಸಂಸ್ಥೆಯ ವಿವಿಧ ವಿಭಾಗಗಳಿಗೆ ಉಪಕರಣಗಳನ್ನು ಖರೀದಿಸಿ ಪೂರೈಸುವ ಸಂಬಂಧವಾಗಿ ರೂ. 9,70,00,000/– ಗಳನ್ನು ಬಿಡುಗಡೆ ಮಾಡಲಾಗಿದ್ದು, ಅನುದಾನವು ಲಭ್ಯವಿರುತ್ತದೆ.

<u>ಉಪಕರಣಗಳ ವಿವರ ಈ ಕೆಳಗಿನಂತಿದೆ.</u>

| Sl.No. | Name of the Equipment | Required Qty | Approx. cost |
|---|---|---|---|
| 1 | High End Ultra Sound Machine | 01 | 30,00,000/- |

ಕಾರಣ ರೇಡಿಯಾಲಜಿ ವಿಭಾಗಕ್ಕೆ ಅವಶ್ಯವಿರುವ **High End Ultra Sound Machine** ಉಪಕರಣವನ್ನು ಖರೀದಿಸಲು ಕೆಟಿಪಿಪಿ ಕಾಯ್ದೆಯನ್ವಯ 30 ದಿನಗಳ ಕಾಲವಕಾಶ ನೀಡಿ ನಿಯಮಾನುಸಾರ ಟೆಂಡರ್ ಆಹ್ವಾನಿಸಲು ಹಾಗೂ ಈ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ ಆಕುಕ / 465 / ಎಂಪಿಎಸ್ / 2018 ದಿನಾಂಕ 14.03.2018 ರನ್ವಯ ಬಿಡುಗಡೆ ಮಾಡಲಾದ ಅನುದಾನದಿಂದ ಭರಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :-**

ರಿಮ್ಸ್ ಬೋಧಕ ಆಸ್ಪತ್ರೆಯ ರೇಡಿಯಾಲಜಿ ವಿಭಾಗಕ್ಕೆ ಅವಶ್ಯವಿರುವ **High End Ultra Sound Machine** ಉಪಕರಣವನ್ನು ನಿಯಮಾನುಸಾರ ಖರೀದಿಸಲು ಕೆಟಿಪಿಪಿ ಕಾಯ್ದೆಯನ್ವಯ 30 ದಿನಗಳ ಕಾಲವಕಾಶ ನೀಡಿ ಟೆಂಡರ್ ಆಹ್ವಾನಿಸಲು ಹಾಗೂ ಇದಕ್ಕೆ ತಗುಲುವ ಅಂದಾಜು ರೂ. 30.00 ಲಕ್ಷಗಳ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ ಆಕುಕ / 465 / ಎಂಪಿಎಸ್ / 2018 ದಿನಾಂಕ 14.03.2018 ರನ್ವಯ ಬಿಡುಗಡೆ ಮಾಡಲಾದ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು. ಸದರಿ ಟೆಂಡರ್ ಅಧಿಸೂಚನೆಯನ್ನು ನವಂಬರ್ – 2018ರ ಅಂತ್ಯದೊಳಗೆ ಹೊರಡಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.



Director
RIMS, Raichur

| ವಿಷಯ ಸೂಚಿ ಸಂಖ್ಯೆ – 10 | ಎಲುಬು ಮತ್ತು ಕೀಲು ವಿಭಾಗಗಕ್ಕೆ ಅವಶ್ಯವಿರುವ ಉಪಕರಣಗಳನ್ನು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ನಿಯಮಾನುಸಾರ ಖರೀದಿಸಲು ಅನುಮತಿ ನೀಡುವ ಕುರಿತು. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವೈದ್ಯಕೀಯ ಸೀಟುಗಳನ್ನು 100 ರಿಂದ 150 ಕ್ಕೆ ಹೆಚ್ಚಿಸಿರುವುದರಿಂದ ಬೋಧಕ ಆಸ್ಪತ್ರೆಯ ಹಾಸಿಗೆಗಳ 650 ಹಾಸಿಗೆಗಳ ಸಾಮರ್ಥ್ಯವನ್ನು ಹೊಂದಿರುತ್ತದೆ. ಈ ಹಿನ್ನಲೆಯಲ್ಲಿ ಎಲುಬು ಮತ್ತು ಕೀಲು ವಿಭಾಗದಲ್ಲಿ ಚಿಕಿತ್ಸೆ ಪಡೆಯುವ ರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತದೆ. ಈ ಹಿನ್ನಲೆಯಲ್ಲಿ ಎಲುಬು ಮತ್ತು ಕೀಲು ವಿಭಾಗಗಕ್ಕೆ ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ ಅವಶ್ಯವಿರುವ ಈ ಕೆಳಕಂಡ ಉಪಕರಣಗಳನ್ನು ಖರೀದಿಸಲು ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು ಮನವಿಯನ್ನು ರಿಮ್ಸ್ ಕಾರ್ಯಲಯಕ್ಕೆ ದಿನಾಂಕ 05.11.2018 ರಂದು ಸಲ್ಲಿಸಿರುತ್ತಾರೆ. ಸದರಿ ಉಪಕರಣಗಳನ್ನು ಖರೀದಿಸಲು ಅಂದಾಜು ರೂ. 99,10,000/– ಗಳಾಗುವ ಸಾಧ್ಯತೆಯಿರುತ್ತದೆ. ಆದರೆ ಸಂಸ್ಥೆಯಲ್ಲಿ ಅನುದಾನ ಲಭ್ಯವಿರುವುದಿಲ್ಲ.

<u>ಉಪಕರಣಗಳ ವಿವರ ಈ ಕೆಳಗಿನಂತಿದೆ.</u>

| Sl.No. | Name of the Equipment | Qty | App. Amount |
|---|---|---|---|
| 1 | Fracture reduction OT tables | 1 | 800000.00 |
| 2 | Cautery Machines | 2 | 40000.00 |
| 3 | Pneumatic Drill and reamer | 1 | 200000.00 |
| 4 | Electric Drill and Reamer set | 1 | 100000.00 |
| 5 | C Arm (Image Intersifier) | 2 | 3500000.00 |
| 6 | Portable X- Ray Machine | 1 | 600000.00 |
| 7 | Arthroscope (Shavers & Accessories) | 1 | 600000.00 |
| 8 | Plaster room equipment (sets) with plastic table | 2 | 60000.00 |
| 9 | Movie camera for demonstration of live operations | 1 | 100000.00 |
| 10 | Spine instrumention set | 1 Set | 200000.00 |
| | OPD | | |
| 11 | Plaster Tables | 2 | 50000.00 |
| 12 | Reflex Hammer | 10 | 100.00 |
| 13 | Measure Tape | 20 | 50.00 |
| 14 | Goniometer | 10 | 800.00 |
| | | App. Cost | 99,10,000.00 |

ಕಾರಣ ರಿಮ್ಸ್ ಬೋಧಕ ಆಸ್ಪತ್ರೆಯ ಎಲುಬು ಮತ್ತು ಕೀಲು ವಿಭಾಗಗಕ್ಕೆ ಭಾರತೀಯ ವೈದ್ಯಕೀಯ ಮಂಡಳಿಯು ನಿಯಮದಂತೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು ಕೆಟಿಪಿಪಿ ಕಾಯ್ದೆಯನ್ವಯ 30 ದಿನಗಳ ಕಾಲವಕಾಶ ನೀಡಿ ಟೆಂಡರ್ ಆಹ್ವಾನಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**<u>ಸಭೆಯ ತೀರ್ಮಾನ :-</u>**

ರಿಮ್ಸ್ ಬೋಧಕ ಆಸ್ಪತ್ರೆಯ ಎಲುಬು ಮತ್ತು ಕೀಲು ವಿಭಾಗಗಕ್ಕೆ ಭಾರತೀಯ ವೈದ್ಯಕೀಯ ಮಂಡಳಿಯು ನಿಯಮದಂತೆ ಅವಶ್ಯವಿರುವ ವಿವಿಧ 14 ಉಪಕರಣಗಳನ್ನು ನಿಯಮಾನುಸಾರ ಖರೀದಿಸಲು ಕೆಟಿಪಿಪಿ ಕಾಯ್ದೆಯನ್ವಯ 30 ದಿನಗಳ ಕಾಲವಕಾಶ ನೀಡಿ ಟೆಂಡರ್ ಆಹ್ವಾನಿಸಲು ಹಾಗೂ ಇದಕ್ಕೆ ತಗುಲುವ ವೆಚ್ಚವನ್ನು ರಿಮ್ಸ್ ಬೋದಕ ಆಸ್ಪತ್ರೆಯ ಬಳಕೆದಾರರ ಖಾತೆಯಿಂದ ಭರಿಸುವಂತೆ ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು. ಸದರಿ ಟೆಂಡರ್ ಅಧಿಸೂಚನೆಯನ್ನು ನವಂಬರ್ – 2018ರ ಅಂತ್ಯದೊಳಗೆ ಹೊರಡಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

Director
RIMS, Raichur

| | |
|---|---|
| ವಿಷಯ ಸೂಚಿ ಸಂಖ್ಯೆ – 11 | ರಿಮ್ಸ್ ವೈದ್ಯಕೀಯ ಕಾಲೇಜು, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಸ್ವಚ್ಚತಾ ಕಾರ್ಯಕರ್ತರ ಸೇವೆಯನ್ನು ನಿಯಮಾನುಸಾರ ಹೊರಗುತ್ತಿಗೆ ಮೂಲಕ ಪಡೆಯಲು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಲು ಅನುಮತಿ ನೀಡುವ ಬಗ್ಗೆ. |

ರಿಮ್ಸ್ ವೈದ್ಯಕೀಯ ಕಾಲೇಜು, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಸ್ವಚ್ಚತಾ ಸಿಬ್ಬಂದಿಗಳು ಹಾಗೂ ಸಫಾಯಿ ಕರ್ಮಚಾರಿಗಳು ಸೇರಿ ಒಟ್ಟು 196 ಸಿಬ್ಬಂದಿಗಳನ್ನು ಹೊರಗುತ್ತಿಗೆಯ ಮೂಲಕ ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಟೆಂಡರ್‌ನಲ್ಲಿ ಎಲ್–1 ಟೆಂಡರ್‌ದಾರರಾದ ಮೆ॥ ರಾಜಣ್ಣ ಸೆಕ್ಯೂರಿಟಿ ಇಂಟಲಿಜೆನ್ಸ್ ಸರ್ವಿಸ್, ರಾಯಚೂರು ಇವರಿಗೆ ಈ ಕಾರ್ಯಲಯದ ಕಾರ್ಯದೇಶ ಸಂಖ್ಯೆ ರಿಮ್ಸ್ / ಪೂರೈಕೆ / ಎಸ್‌ಇಆರ್ / 13 / 2017–18 / 1436 ದಿನಾಂಕ 21.09.2017 ಮತ್ತು ದಿನಾಂಕ 27.10.2017 ರನ್ವಯ ಕಾರ್ಯದೇಶವನ್ನು ದಿನಾಂಕ 27.09.2017 ರಿಂದ ದಿನಾಂಕ 26.09.2018ರ ಒಂದು ವರ್ಷದ ಅವಧಿಗೆ ಕಾರ್ಯದೇಶವನ್ನು ನೀಡಲಾಗಿತ್ತು. ಅದರ ಅವಧಿಯು ದಿನಾಂಕ 26.09.2018 ಕ್ಕೆ ಮುಕ್ತಾಯಗೊಂಡಿರುತ್ತದೆ. ಈ ಹಿನ್ನಲೆಯಲ್ಲಿ ಮುಂದಿನ ಅವಧಿಗೆ ಸ್ವಚ್ಚತಾ ಕಾರ್ಯಕರ್ತರ ಸೇವೆಯನ್ನು ಪಡೆಯಲು ನಿಯಮಾನುಸಾರ ಟೆಂಡರ್ ಆಹ್ವಾನಿಸಬೇಕಾಗಿರುತ್ತದೆ.

ಈ ಹಿಂದೆ 100 ವೈದ್ಯ ವಿದ್ಯಾರ್ಥಿಗಳ ಪ್ರವೇಶಾತಿಗೆ ತಕ್ಕಂತೆ 196 ಸ್ವಚ್ಚತಾ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆಯ ಮೂಲಕ ಪಡೆಯಲಾಗಿತ್ತು. ಆದರೆ ಪ್ರಸ್ತುತ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವೈದ್ಯಕೀಯ ಸೀಟುಗಳನ್ನು 100 ರಿಂದ 150 ಕ್ಕೆ ಹೆಚ್ಚಿಸಲಾಗಿರುತ್ತದೆ. ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದ ಪ್ರಕಾರ ವಿಭಾಗಗಳನ್ನು ಮಾರ್ಪಡಿಸಿ ವಿಸ್ತರಿಸಲಾಗಿರುತ್ತದೆ. ಹಾಗೂ ಆಸ್ಪತ್ರೆಯ ಹಾಸಿಗೆಯ ಸಾಮರ್ಥ್ಯವನ್ನು 450 ರಿಂದ 650 ಹಾಸಿಗೆಗಳಿಗೆ ಹೆಚ್ಚಿಸಲಾಗಿರುತ್ತದೆ. ಹಾಗೂ ರೋಗಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಳವಾಗಿರುತ್ತದೆ. ಮತ್ತು ಈ ಮೊದಲು ಓಪಿಡಿ 400 ರಿಂದ 500 ಇರುತ್ತಿತ್ತು. ಪ್ರಸ್ತುತ 950 ರಿಂದ 1000 ಮೇಲ್ಪಟ್ಟು ಆಗಿರುತ್ತದೆ. ಅದೇ ರೀತಿ ಒಳರೋಗಿಗಳ ಸಂಖ್ಯೆ 350 ರಿಂದ 400 ಇದ್ದದ್ದು, 800 ರಿಂದ 900 ಆಗಿರುತ್ತದೆ. ಪ್ರವೇಶಾತಿ ಹೆಚ್ಚಳವಾಗಿರುವುದರಿಂದ ನೂತನ ಆಸ್ಪತ್ರೆಯ ಕಟ್ಟಡದಲ್ಲಿನ ಎಲ್ಲಾ ಕೊಠಡಿ / ವಾರ್ಡ್‌ಗಳು ಮತ್ತು 200 ಹೆಚ್ಚು ಶೌಚಾಲಯಗಳನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ.

ಇದರ ಜೊತೆಗೆ ನೂತನ ಆಸ್ಪತ್ರೆಯಲ್ಲಿ ನಿರ್ವಹಣಾ ವಿಭಾಗವನ್ನು ಪ್ರಾರಂಭಿಸುವ ಸಂಬಂಧ ದಿನಾಂಕ 16.04.2016 ರಂದು ಜರುಗಿದ ರಿಮ್ಸ್ ಸಂಸ್ಥೆಯ 11ನೇ ಆರ್ಥಿಕ ಸಮಿತಿ ಸಭೆಯಲ್ಲಿ ಅನುಮೋದನೆಯನ್ನು ಪಡೆಯಲಾಗಿತ್ತು. ಈ ಹಿನ್ನಲೆಯಲ್ಲಿ ರಿಮ್ಸ್ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಗಳಿಗೆ ದೈನಂದಿನ ಸ್ವಚ್ಚತೆಯ ಹಿತದೃಷ್ಟಿಯಿಂದ ಇನ್ನು 71 ಹೆಚ್ಚುವರಿ ಸ್ವಚ್ಚತಾ ಮತ್ತು ಸಫಾಯಿ ಕರ್ಮಚಾರಿಗಳ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಮೂಲಕ ಪಡೆಯುವುದು ಅನಿವಾರ್ಯವಾಗಿರುತ್ತದೆ.

| ಕ್ರಮ ಸಂಖ್ಯೆ | ಸಿಬ್ಬಂದಿಗಳ ವಿವರ | ಪ್ರಸ್ತುತ ಸೇವೆ ಪಡೆಯಲಾಗುತ್ತಿರುವ ಸ್ವಚ್ಚತಾ ಸಿಬ್ಬಂದಿಗಳ ಸಂಖ್ಯೆ | ಇನ್ನು ಅವಶ್ಯವಿರುವ ಹೆಚ್ಚುವರಿ ಸ್ವಚ್ಚತಾ ಸಿಬ್ಬಂದಿಗಳ ಸಂಖ್ಯೆ | ಒಟ್ಟು ಅವಶ್ಯವಿರುವ ಸಿಬ್ಬಂದಿಗಳ ಸಂಖ್ಯೆ |
|---|---|---|---|---|
| 1 | ಸ್ವಚ್ಚತಾ ಸಿಬ್ಬಂದಿಗಳು | 150 (ರಿಮ್ಸ್) + 36 (ಓಪೆಕ್ = 186 | 75 | 225 |
| 2 | ಸಫಾಯಿ ಕರ್ಮಚಾರಿಗಳು | 10 | 10 | 20 |
| 3 | ನಿರ್ವಹಣಾ ವಿಭಾಗಗಕ್ಕೆ ಅವಶ್ಯವಿರುವ ಸಿಬ್ಬಂದಿಗಳು | 22 | – | 22 |
| | ಒಟ್ಟು | 218 | 85 | 267 |

ಕಾರಣ ರಿಮ್ಸ್ ವೈದ್ಯಕೀಯ ಕಾಲೇಜು, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಒಟ್ಟು 267 ಸ್ವಚ್ಚತಾ ಸಿಬ್ಬಂದಿಗಳ ಸೇವೆ ಹಾಗೂ ಆಸ್ಪತ್ರೆಯ ನಿರ್ವಹಣಾ ವಿಭಾಗದ ಸೇವೆಯನ್ನು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಿ ಹೊರಗುತ್ತಿಗೆಯ ಮೂಲಕ ಪಡೆಯಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

Director
RIMS, Raichur

**ಸಭೆಯ ತೀರ್ಮಾನ :-**

ರಿಮ್ಸ್ ವೈದ್ಯಕೀಯ ಕಾಲೇಜು, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸ್ವಚ್ಛತಾ ಸಿಬ್ಬಂದಿಗಳ ಟೆಂಡರ್‌ನ್ನು ಈ ಕೆಳಗಿನಂತೆ ಆಹ್ವಾನಿಸಲು ಸೂಚಿಸಲಾಯಿತು.

1) ರಿಮ್ಸ್ ಹಾಗೂ ಓಪೆಕ್ ಆಸ್ಪತ್ರೆಗೆ ಅವಶ್ಯವಿರುವ 196 ಸ್ವಚ್ಛತಾ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಪಿ.ಎಂ.ಎಸ್.ಎಸ್.ವೈ, ಬೆಂಗಳೂರು ಸಂಸ್ಥೆಯಲ್ಲಿ ಆಹ್ವಾನಿಸಿರುವ ಟೆಂಡರ್ ಮಾದರಿಯಂತೆ ರಿಮ್ಸ್ ಸಂಸ್ಥೆಯಲ್ಲಿಯೂ ಸಹ ಟೆಂಡರ್‌ನ್ನು ಆಹ್ವಾನಿಸಲು ಅನುಮೋದಿಸಲಾಯಿತು.

2) ರಿಮ್ಸ್ ಬೋದಕ ಆಸ್ಪತ್ರೆ ಹಾಗೂ ಓಪೆಕ್ ಆಸ್ಪತ್ರೆಗೆ ಶೌಚಾಲಯಗಳ ಸ್ವಚ್ಛತೆಯ ನಿಮಿತ್ತ ಅವಶ್ಯವಿರುವ 20 ಸಫಾಯಿ ಕರ್ಮಚಾರಿಗಳ ಸೇವೆಯನ್ನು ಸೇವಾ ಗುತ್ತಿಗೆಯಿಂದ ಪಡೆದುಕೊಳ್ಳುವಂತೆ ಸೂಚಿಸಲಾಯಿತು.

3) ರಿಮ್ಸ್ ಬೋದಕ ಆಸ್ಪತ್ರೆ ಹಾಗೂ ಓಪೆಕ್ ಆಸ್ಪತ್ರೆಯ ನಿರ್ವಹಣಾ ವಿಭಾಗಗಕ್ಕೆ ಅವಶ್ಯವಿರುವ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಪ್ರತ್ಯೇಕವಾಗಿ ಟೆಂಡರ್ ಆಹ್ವಾನಿಸುವಂತೆ ಅನುಮೋದಿಸಲಾಯಿತು.

4) ರಿಮ್ಸ್ ಬೋದಕ ಆಸ್ಪತ್ರೆ ಹಾಗೂ ಓಪೆಕ್ ಆಸ್ಪತ್ರೆಯಲ್ಲಿ ಸ್ವಚ್ಛತೆ ಹಾಗೂ ಆರೋಗ್ಯದ ಬಗ್ಗೆ ಅರಿವನ್ನು ಮೂಡಿಸಲು ಎಲ್ಲಾ ಕಡೆ ಭಿತ್ತಿ ಚಿತ್ರ / ಸೂಚನಾ ಫಲಕಗಳನ್ನು ಅಳವಡಿಸಲು ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 12 | ರಿಮ್ಸ್ ಆವರಣದಲ್ಲಿರುವ ವಿದ್ಯಾರ್ಥಿಗಳ, ವಿದ್ಯಾರ್ಥಿನಿಯರ ವಸತಿ ನಿಲಯಗಳು ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವಸತಿ ಸಮುಚ್ಚಯಗಳಲ್ಲಿ ಪ್ಲಂಬಿಂಗ್ ದುರಸ್ಥಿ ಕಾರ್ಯಗಳನ್ನು **K.H.S.R.D.P,** ರಾಯಚೂರು ಇವರ ಮುಖಾಂತರ ನಿಯಮಾನುಸಾರ ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ |

ರಿಮ್ಸ್ ಆವರಣದಲ್ಲಿರುವ ವಿದ್ಯಾರ್ಥಿಗಳ, ವಿದ್ಯಾರ್ಥಿನಿಯರ ವಸತಿ ನಿಲಯಗಳು ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವಸತಿ ಸಮುಚ್ಚಯಗಳನ್ನು ನಿರ್ಮಿಸಿ ಸುಮಾರು 12 ವರ್ಷಗಳಾಗಿರುವುದರಿಂದ, ಸದರಿ ಕಟ್ಟಡಗಳಲ್ಲಿ ದಿನದಿಂದ ದಿನಕ್ಕೆ ವಿಪರೀತವಾಗಿ ಪ್ಲಂಬಿಂಗ್ ದುರಸ್ಥಿಗಳು ಬರುತ್ತಿವೆ. ಸದರಿ ಕಟ್ಟಡಗಳ ಪ್ಲಂಬಿಂಗ್ ಪೈಪ್‌ಗಳನ್ನು ಅಳವಡಿಸಿ ಸುಮಾರು ವರ್ಷಗಳಾಗಿರುವುದರಿಂದ ಅವುಗಳು ತುಕ್ಕು ಹಿಡಿದು ನೀರು ಸೋರಿಕೆಯಾಗುತ್ತಿವೆ. ಇದರಿಂದಾಗಿ ಕಟ್ಟಡಗಳಲ್ಲಿ ನೀರು ಸೋರಿಕೆಯಿಂದ ತೇವಾಂಶ ಹೆಚ್ಚಿಗೆಯಾಗಿ ಕಟ್ಟಡಗಳಿಗೆ ಧಕ್ಕೆ ಉಂಟಾಗುವ ಸಾಧ್ಯತೆಯಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಟ್ಟಡಗಳಿಗೆ ಎಲ್ಲಾ ಕಡೆ ಹಳೆಯ ಪೈಪ್‌ಗಳನ್ನು ತೆರವುಗೊಳಿಸಿ, ಯೂ.ಪಿ.ಯೂ.ಸಿ ಪೈಪ್‌ಗಳನ್ನು ಅಳವಡಿಸುವ ಸಂಬಂಧ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ಇವರನ್ನು ಈ ಕಾರ್ಯಲಯದ ಪತ್ರ ಸಂಖ್ಯೆ ರಿಮ್ಸ್ / ಸಾಮಾನ್ಯ / ಅಭಿವೃದ್ಧಿ / 2018-19 / 172 ದಿನಾಂಕ 25.10.2018 ರನ್ವಯ ಕೋರಲಾಗಿತ್ತು.

ಸದರಿ ಕಟ್ಟಡಗಳಲ್ಲಿನ ಪ್ಲಂಬಿಂಗ್ ದುರಸ್ಥಿ ಕಾರ್ಯಗಳನ್ನು ಕೈಗೊಳ್ಳಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ಇವರು ಒಟ್ಟು ರೂ. 1,50,00,000/- ಗಳ ಅಂದಾಜು ಪಟ್ಟಿಯನ್ನು ಧೃಡಿಕರಿಸಿ ದಿನಾಂಕ 07.11.2018 ರಂದು ರಿಮ್ಸ್ ಕಾರ್ಯಲಯಕ್ಕೆ ಸಲ್ಲಿಸಿರುತ್ತಾರೆ.

ರಿಮ್ಸ್ ಸಂಸ್ಥೆಯ ಆವರಣದಲ್ಲಿ ವಾಸವಿರುವ ಸಿಬ್ಬಂದಿಗಳ ಮನೆ ಬಾಡಿಗೆ ಭತ್ಯೆಯನ್ನು ಕಟಾಯಿಸಿ, ರಿಮ್ಸ್ ಸಂಸ್ಥೆಯ ನಿರ್ವಹಣಾ ಖಾತೆ ಸಂಖ್ಯೆ. 62129977456 ಕ್ಕೆ ಜಮಾ ಮಾಡಲಾಗುತ್ತಿದ್ದು, ಸದರಿ ಖಾತೆಯಲ್ಲಿ ರೂ. 4.00 ಕೋಟಿಗಳ ಅನುದಾನವು ಸಂಗ್ರಹವಾಗಿದ್ದು, ಅನುದಾನವು ಲಭ್ಯವಿರುತ್ತದೆ.



Director
RIMS, Raichur

ಕಾರಣ ವಿದ್ಯಾರ್ಥಿಗಳ ವಸತಿ ನಿಲಯಗಳು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವಸತಿ ಸಮುಚ್ಚಯಗಳಲ್ಲಿ ಉದ್ಭವಿಸಿರುವ ಪ್ಲಂಬಿಂಗ್ ದುರಸ್ಥಿ ಕಾರ್ಯಗಳನ್ನು ಕೈಗೊಳ್ಳಲು ರೂ. 1,50,00,000/- ಗಳ ಅಂದಾಜು ಪಟ್ಟಿಗೆ ಅನುಮೋದನೆಯನ್ನು ನೀಡಿ, ಸದರಿ ಪ್ಲಂಬಿಂಗ್ ದುರಸ್ಥಿ ಕಾರ್ಯಗಳನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು **(K.H.S.R.D.P)** ಇವರ ಮುಖಾಂತರ ನಿಯಮಾನುಸಾರ ಕೈಗೊಳ್ಳಲು ಅನುಮತಿ ನೀಡುವಂತೆ ಹಾಗೂ ರೂ. 1,50,00,000/- ಗಳ ವೆಚ್ಚವನ್ನು ರಿಮ್ಸ್ ಸಂಸ್ಥೆಯ ಖಾತೆ ಸಂಖ್ಯೆ 62129977456 ರಲ್ಲಿ ಸಂಗ್ರಹವಾಗಿರುವ ರೂ. 4.00 ಕೋಟಿಗಳ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :-**

ರಿಮ್ಸ್ ಸಂಸ್ಥೆಯ ಆವರಣದಲ್ಲಿರುವ ವಿದ್ಯಾರ್ಥಿಗಳ ವಸತಿ ನಿಲಯಗಳು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವಸತಿ ಸಮುಚ್ಚಯಗಳಲ್ಲಿ ಉದ್ಭವಿಸಿರುವ ಪ್ಲಂಬಿಂಗ್ ಹಾಗೂ ಇತರ ದುರಸ್ಥಿ ಕಾರ್ಯಗಳನ್ನು ಕೈಗೊಳ್ಳಲು ರೂ. 1,50,00,000/- ಗಳ ಅಂದಾಜು ಪಟ್ಟಿಯನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಲಾಯಿತು. ಹಾಗೂ ಸದರಿ ಕಾಮಗಾರಿಯನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು **(K.H.S.R.D.P)** ಇವರ ಮುಖಾಂತರ ಕೈಗೊಳ್ಳಲು ಅನುಮೋದನೆಯನ್ನು ನೀಡಲಾಯಿತು. ಹಾಗು ಸದರಿ ಕಾಮಗಾರಿಗೆ ತಗುಲುವ ಅಂದಾಜು ವೆಚ್ಚವನ್ನು ರಿಮ್ಸ್ ಸಂಸ್ಥೆಯ ನಿರ್ವಹಣಾ ಖಾತೆ ಸಂಖ್ಯೆ 62129977456 ರಲ್ಲಿ ಸಂಗ್ರಹವಾಗಿರುವ ರೂ. 4.00 ಕೋಟಿಗಳ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 13 | ರಿಮ್ಸ್ ಸಂಸ್ಥೆಯ ಆವರಣದಲ್ಲಿನ ನಂದಿನಿ ಕ್ಷೀರ ಮಳಿಗೆಯಿಂದ ರಿಮ್ಸ್ ಬೋಧಕ ಆಸ್ಪತ್ರೆಯ ಶವಗಾರದವರೆಗೆ ಹಾಗೂ ಓಪೆಕ್ ಆಸ್ಪತ್ರೆಯ ಕಾಂಪೌಂಡ್‌ನಿಂದ ಘನ ತ್ಯಾಜ್ಯ ಘಟಕದವರೆಗೆ ಕಬ್ಬಿಣದ ಬೇಲಿಯನ್ನು ಹಾಗೂ ಆಸ್ಪತ್ರೆಯಲ್ಲಿ ಮುಂಭಾಗದಲ್ಲಿರುವ ಗಾರ್ಡನ್‌ಗೆ ಗ್ರಿಲ್ ಅಳವಡಿಸುವ ಕಾಮಗಾರಿಯನ್ನು ಕೆ.ಹೆಚ್.ಎಸ್.ಆರ್.ಡಿ.ಪಿ, ರಾಯಚೂರು ಇವರ ಮುಖಾಂತರ ನಿಯಮಾನುಸಾರ ಕೈಗೊಳ್ಳಲು ಅನುಮೋದನೆ ನೀಡುವ ಬಗ್ಗೆ. |

ಅಧ್ಯಕ್ಷರು, ರಿಮ್ಸ್ ವೈದ್ಯ ವಿದ್ಯಾರ್ಥಿಗಳ ಸಂಘ, ರಿಮ್ಸ್ ರಾಯಚೂರು ಇವರು ರಿಮ್ಸ್ ಸಂಸ್ಥೆಯ ಆವರಣದಲ್ಲಿರುವ ನಂದಿನಿ ಕ್ಷೀರ ಮಳಿಗೆಯಿಂದ ರಿಮ್ಸ್ ಬೋದಕ ಆಸ್ಪತ್ರೆಯ ಶವಗಾರದವರೆಗೆ ಬೇಲಿಯನ್ನು ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ರಿಮ್ಸ್ ಬೋಧಕ ಆಸ್ಪತ್ರೆಗೆ ಬರುವ ರೋಗಿಗಳು ಹಾಗೂ ಅವರ ಸಹಚರರು ಸದರಿ ಸ್ಥಳವನ್ನು ಶೌಚಾಲಯಕ್ಕಾಗಿ ಬಳಸುತ್ತಿದ್ದಾರೆ. ಇದರಿಂದಾಗಿ ಆಸ್ಪತ್ರೆಯ ಆವರಣವು ಕಲುಷಿತಗೊಳ್ಳುತ್ತಿದ್ದು, ದುರ್ವಾಸನೆಯಿಂದ ದೈನಂದಿನ ಕಾರ್ಯ ಚಟುವಟಿಕೆಗಳಿಗೆ ತೊಂದರೆಯಾಗುತ್ತಿದ್ದು, ಈ ಹಿನ್ನಲೆಯಲ್ಲಿ ರಿಮ್ಸ್ ಆವರಣದಲ್ಲಿನ ನಂದಿನಿ ಕ್ಷೀರ ಮಳಿಗೆಯಿಂದ ರಿಮ್ಸ್ ಬೋದಕ ಆಸ್ಪತ್ರೆಯ ಶವಗಾರದವರೆಗೆ ಕಬ್ಬಿಣದ ಬೇಲಿಯನ್ನು ನಿರ್ಮಿಸಿದಲ್ಲಿ ಆಸ್ಪತ್ರೆಯ ಆವರಣವನ್ನು ಸ್ವಚ್ಛವಾಗಿಡಲಿಕ್ಕೆ ಸಾಧ್ಯವಾಗುತ್ತದೆ. ಈ ಹಿನ್ನಲೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನೀಯರಿಂಗ್ ಉಪವಿಭಾಗ, ರಾಯಚೂರು ಇವರಿಗೆ ನಂದಿನಿ ಕ್ಷೀರ ಮಳಿಗೆಯಿಂದ ರಿಮ್ಸ್ ಬೋದಕ ಆಸ್ಪತ್ರೆಯ ಶವಗಾರದವರೆಗೆ ಬೇಲಿಯನ್ನು ನಿರ್ಮಿಸುವ ಸಂಬಂಧ ಅವಶ್ಯವಿರುವ ವಿವರವಾದ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನೀಯರಿಂಗ್ ವಿಭಾಗ, ರಾಯಚೂರು ಇವರನ್ನು ಈ ಕಾರ್ಯಲಯದ ಪತ್ರ ಸಂಖ್ಯೆ ರಿಮ್ಸ್ /ಸಾಮಾನ್ಯ/ಅಭಿವೃದ್ಧಿ /2018-19 /97 ದಿ.07.07.2018 ರನ್ವಯ ಕೋರಲಾಗಿತ್ತು.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನೀಯರಿಂಗ್ ಉಪವಿಭಾಗ, ರಾಯಚೂರು ಇವರು ದಿನಾಂಕ 03.08.2018 ರ ಪತ್ರದಲ್ಲಿ ನಂದಿನಿ ಕ್ಷೀರ ಮಳಿಗೆಯಿಂದ ರಿಮ್ಸ್ ಬೋದಕ ಆಸ್ಪತ್ರೆಯ ಶವಗಾರದವರೆಗೆ ಬೇಲಿಯನ್ನು ನಿರ್ಮಿಸುವ ಸಂಬಂಧ ರೂ. 85,00,000/- ಗಳ ವಿವರವಾದ ಅಂದಾಜು ಪಟ್ಟಿಯನ್ನು ರಿಮ್ಸ್ ಕಾರ್ಯಲಯಕ್ಕೆ ಸಲ್ಲಿಸಿರುತ್ತಾರೆ.



Director
RIMS, Raichur

ಸದರಿ ಪ್ರಸ್ತಾವನೆಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆಯುವ ಸಂಬಂಧ ವಿವರವಾದ ಪ್ರಸ್ತಾವನೆಯನ್ನು ಈ ಕಾರ್ಯಾಲಯದ ಪತ್ರ ಸಂಖ್ಯೆ ರಿಮ್ಸ್ / ಸಾಮಾನ್ಯ / ಅಭಿವೃದ್ಧಿ / 2018-19 / 52 ದಿನಾಂಕ 04.08.2018 ರನ್ವಯ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಸರ್ಕಾರವು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸದರಿ ಕಾಮಗಾರಿಯನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಯಾವುದೇ ಅನುದಾನ ಲಭ್ಯವಿಲ್ಲದಿರುವುದರಿಂದ, ಈ ಕಾಮಗಾರಿಯನ್ನು ಕೈಗೊಳ್ಳಲು ಸಂಸ್ಥೆಯಲ್ಲಿ ಅನುದಾನ ಲಭ್ಯವಿದ್ದಲ್ಲಿ ಅಥವಾ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಪಡೆಯುವ ಬಗ್ಗೆ ಕ್ರಮ ವಹಿಸುವಂತೆ ಸೂಚಿಸಲಾಗಿರುತ್ತದೆ.

ಅದೇ ರೀತಿ ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು ಇವರು ಆಸ್ಪತ್ರೆಯ ಬ್ಲಾಕ್ "ಬಿ" ಕಟ್ಟಡವನ್ನು ನಿರ್ಮಿಸಲು ಮೀಸಲಿರುವ ಸ್ಥಳದಲ್ಲಿ ಆವರಣದಲ್ಲಿ ಸಾರ್ವಜನಿಕರು ಮಲ ಹಾಗೂ ಮೂತ್ರ ವಿಸರ್ಜನೆ ಮಾಡಿ ಹೊಲಸು ಮಾಡುತ್ತಿದ್ದು, ಆಸ್ಪತ್ರೆಯ ಸುರಕ್ಷತಾ ಹಾಗೂ ಸ್ವಚ್ಛತೆಯ ದೃಷ್ಟಿಯಿಂದ ರಿಮ್ಸ್ ಬೋಧಕ ಆಸ್ಪತ್ರೆಯ ಆವರಣ ಹಾಗೂ ಗಾರ್ಡನ್ ಒಳಗೆ ಸಾರ್ವಜನಿಕರು ಮತ್ತು ರೋಗಿಗಳ ಸಂಬಂಧಿಕರು ಕುಳಿತುಕೊಂಡು ಊಟ ಮಾಡುವುದು ಹಾಗೂ ಕಸವನ್ನು ಚೆಲ್ಲುವುದು ಮಾಡುವುದರಿಂದ ಗ್ರೀಲ್‌ಗಳನ್ನು ಅಳವಡಿಸಿ ಕೊಡುವಂತೆ ಕೋರಿರುತ್ತಾರೆ.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನೀಯರಿಂಗ್ ಉಪವಿಭಾಗ, ರಾಯಚೂರು ಇವರು ಪತ್ರ ಸಂಖ್ಯೆ ಸಕಾನಿಅ / ಆಕುಕ / ಇಂ / ಉವಿರಾ / ತಾಂಶಾ / 2018-19 / 364 ದಿನಾಂಕ 17.10.2018 ರ ಪತ್ರದಲ್ಲಿ ಸದರಿ ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ರೂ. 98,00,000/- ಗಳ ಅಂದಾಜು ಪಟ್ಟಿಯನ್ನು ರಿಮ್ಸ್ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಕಾರಣ ರಿಮ್ಸ್ ಸಂಸ್ಥೆಯ ಆವರಣದಲ್ಲಿನ ನಂದಿನಿ ಕ್ಷೀರ ಮಳಿಗೆಯಿಂದ ರಿಮ್ಸ್ ಬೋಧಕ ಆಸ್ಪತ್ರೆಯ ಶವಗಾರದವರೆಗಿನ ಕಾಮಗಾರಿಗೆ ರೂ. 88,00,000/- ಗಳು ಹಾಗೂ ಓಪೆಕ್ ಆಸ್ಪತ್ರೆಯ ಕಾಂಪೌಂಡ್‌ನಿಂದ ಘನ ತ್ಯಾಜ್ಯ ಘಟಕದವರೆಗೆ ಕಬ್ಬಿಣದ ಬೇಲಿಯನ್ನು ಹಾಗೂ ಆಸ್ಪತ್ರೆಯಲ್ಲಿ ಮುಂಭಾಗದಲ್ಲಿರುವ ಗಾರ್ಡನ್‌ಗೆ ಗ್ರಿಲ್ ಅಳವಡಿಸಲು ರೂ. 98,00,000/- ಗಳು ಸೇರಿ ಒಟ್ಟು ರೂ. 1,86,00,000/- ಗಳಿಗೆ ಅನುಮೋದನೆಯನ್ನು ನೀಡಿ ಸದರಿ ಕಾಮಗಾರಿಯನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ಇವರ ಮುಖಾಂತರ ಕೈಗೊಳ್ಳಲು ಹಾಗೂ ಈ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ಖಾತೆ ಸಂಖ್ಯೆ 62334775412 ರಲ್ಲಿ ರೂ. 4,00,00,000/- ಗಳ ಅನುದಾನ ಸಂಗ್ರಹವಾಗಿದ್ದು, ಸದರಿ ಖಾತೆಯಿಂದ ಈ ವೆಚ್ಚವನ್ನು ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :-**

ರಿಮ್ಸ್ ಸಂಸ್ಥೆಯ ಆವರಣದಲ್ಲಿನ ನಂದಿನಿ ಕ್ಷೀರ ಮಳಿಗೆಯಿಂದ ರಿಮ್ಸ್ ಬೋಧಕ ಆಸ್ಪತ್ರೆಯ ಶವಗಾರದವರೆಗೆ ಕಬ್ಬಿಣದ ಬೇಲಿಯನ್ನು ನಿರ್ಮಿಸುವ ಕಾಮಗಾರಿಯ ರೂ. 88,00,000/- ಗಳ ಅಂದಾಜು ಪಟ್ಟಿಯನ್ನು ಹಾಗೂ ಓಪೆಕ್ ಆಸ್ಪತ್ರೆಯ ಕಾಂಪೌಂಡ್‌ನಿಂದ ಘನ ತ್ಯಾಜ್ಯ ಘಟಕದವರೆಗೆ ಕಬ್ಬಿಣದ ಬೇಲಿಯನ್ನು ಹಾಗೂ ಆಸ್ಪತ್ರೆಯಲ್ಲಿ ಮುಂಭಾಗದಲ್ಲಿರುವ ಗಾರ್ಡನ್‌ಗೆ ಗ್ರಿಲ್ ಅಳವಡಿಸುವ ಕಾಮಗಾರಿಯನ್ನು ಕೈಗೊಳ್ಳಲು ಸಲ್ಲಿಸಿರುವ ರೂ. 98,00,000/- ಗಳ ಅಂದಾಜು ಪಟ್ಟಿಗಳನ್ನು ಪರಿಶೀಲಿಸಿ ಅನುಮೋದನೆ ನೀಡಲಾಯಿತು. ಹಾಗೂ ಸದರಿ ಕಾಮಗಾರಿಗಳನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ಇವರ ಮುಖಾಂತರ ಕೈಗೊಳ್ಳಲು ಅನುಮತಿಯನ್ನು ನೀಡಿ ಇದಕ್ಕೆ ತಗುಲುವ ಒಟ್ಟು ರೂ. 1,86,00,000/- ಗಳ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ಖಾತೆ ಸಂಖ್ಯೆ 62334775412 ರಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಭರಿಸಲು *ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.*

Director
RIMS, Raichur

| ವಿಷಯ ಸೂಚಿ ಸಂಖ್ಯೆ – 14 | ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಇ – ಹಾಸ್ಪಿಟಲ್ ಸಮರ್ಪಕ ಅನುಷ್ಠಾನದ ಸಂಬಂಧ ದುರಸ್ಥಿಯಲ್ಲಿರುವ ಡಾಟ ನೆಟ್‌ವರ್ಕಿಂಗ್ ಹಾಗೂ ಕ್ಯಾಮರಾಗಳ ದುರಸ್ಥಿ ಕಾರ್ಯವನ್ನು ನಿರ್ಭಯ ಯೋಜನೆ ಅಡಿಯಲ್ಲಿ ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ |
|---|---|

ರಿಮ್ಸ್ ಆವರಣದಲ್ಲಿರುವ 520 ಹಾಸಿಗೆಗಳ ಬೋಧಕ ಆಸ್ಪತ್ರೆಯಲ್ಲಿ ಆಗು ಹೂಗುವ ಚಲನವಲನಗಳು, ಹೊರಗಿನ ಚಲನ ವಲನಗಳನ್ನು ಗಮನಿಸಲು ಮತ್ತು ಆಸ್ಪತ್ರೆಯಲ್ಲಿ ಶಿಸ್ತನ್ನು ಕಾಪಾಡಲು ಮತ್ತು ರಾಜ್ಯದಲ್ಲಿ ಉತ್ತಮ ಮಾಧರಿ ಆಸ್ಪತ್ರೆಯನ್ನಾಗಿ ಮಾಡಲು ಹಾಗೂ ಸಂಸ್ಥೆಯ ಭದ್ರತೆ ಹಾಗೂ ಸುರಕ್ಷತೆಯ ಹಿತದೃಷ್ಟಿಯಿಂದ ನೂತನ ಬೋಧಕ ಆಸ್ಪತ್ರೆಗೆ ಸಿಸಿಟಿವಿ, ಡಾಟ ನೆಟ್‌ವರ್ಕ, ಪಬ್ಲಿಕ್ ಅರ್ಡಸ್ ಸಿಸ್ಟಮ್ ಹಾಗೂ ಐಪಿಬಿಎಕ್ಸ್ ನ್ನು ಅಳವಡಿಸುವುದು ಅತಿ ಅವಶ್ಯಕವಂದು ತೀರ್ಮಾನಿಸಿ ಸರ್ಕಾರದ ಆದೇಶ ಸಂಖ್ಯೆ. ಆಕುಕ / 37 / ಎಂಎಂಇ / 2013 ದಿನಾಂಕ 12.04.2013 ರನ್ವಯ ರೂ. 84,96,085/– ಗಳನ್ನು ಸಿಸಿಟಿವಿ ಅಳವಡಿಸಲು, ಸರ್ಕಾರದ ಆದೇಶ ಸಂಖ್ಯೆ. ಆಕುಕ / 38 / ಎಂಎಂಇ / 2013 ದಿನಾಂಕ 10.04.2013 ರನ್ವಯ ರೂ. 78,64,223/– ಗಳನ್ನು ಐಪಿಬಿಎಕ್ಸ್ ಅಳವಡಿಸಲು, ಸರ್ಕಾರದ ಆದೇಶ ಸಂಖ್ಯೆ. ಆಕುಕ / 39 / ಎಂಎಂಇ / 2013 ದಿನಾಂಕ 10.04.2013 ರನ್ವಯ ರೂ. 63,46,018/– ಗಳನ್ನು ಡಾಟ ನೆಟ್‌ವರ್ಕಿಂಗ್ ಅಳವಡಿಸಲು ಮತ್ತು ಸರ್ಕಾರದ ಆದೇಶ ಸಂಖ್ಯೆ. ಆಕುಕ / 40 / ಎಂಎಂಇ / 2013 ದಿನಾಂಕ 12.04.2013 ರನ್ವಯ ರೂ. 42,91,312/– ಗಳಿಗೆ ಪಬ್ಲಿಕ್ ಅರ್ಡಸ್ ಸಿಸ್ಟಮ್ ಕಾಮಗಾರಿಗಳನ್ನು ಕಿಯೋನಿಕ್ಸ್ ಸಂಸ್ಥೆಯ ಮುಖಾಂತರ ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಸರ್ಕಾರವು ಅನುಮೋದನೆಯನ್ನು ನೀಡಿರುತ್ತದೆ.

ನಿರ್ದೇಶಕರು (ಟೆಕ್ನಿಕಲ್), ಕಿಯೋನಿಕ್ಸ್, ಬೆಂಗಳೂರು ದಿನಾಂಕ 12.03.2014 ರ ಪತ್ರದಲ್ಲಿ ಕಿಯೋನಿಕ್ಸ್ ಸಂಸ್ಥೆಯು ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಸಿಸಿಟಿವಿ, ಡಾಟ ನೆಟ್‌ವರ್ಕಿಂಗ್, ಪಬ್ಲಿಕ್ ಅರ್ಡಸ್ ಸಿಸ್ಟಮ್ ಮತ್ತು ಐಪಿಬಿಎಕ್ಸ್‌ಗಳನ್ನು ಅಳವಡಿಸುವ ಸಂಬಂಧ ಈಗಾಗಲೇ ಎರಡು ಬಾರಿ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಮೊದಲನೇ ಬಾರಿ ಟೆಂಡರ್ ಆಹ್ವಾನಿಸಿದ ಸಂಧರ್ಭದಲ್ಲಿ ಇಬ್ಬರು ಟೆಂಡರ್‌ದಾರರು ಭಾಗವಹಿಸಿದ್ದು, ತಾಂತ್ರಿಕ ಕಾರಣಗಳಿಂದ ಇಬ್ಬರು ಟೆಂಡರ್‌ದಾರರ ಟೆಂಡರ್‌ನ್ನು ರದ್ದುಗೊಳಿಸಲಾಗಿತ್ತು. ಆದರೆ ಎರಡನೇ ಬಾರಿ ಆಹ್ವಾನಿಸಿದಾಗ ಓರ್ವ ಟೆಂಡರ್‌ದಾರರು ಭಾಗವಹಿಸಿದ್ದು, ಇದು ಎರಡನೇ ಬಾರಿ ಟೆಂಡರ್ ಆಹ್ವಾನಿಸಿರುವುದರಿಂದ ಟೆಂಡರನ್ನು ಅನುಮೋದಿಸಿ, ಕಿಯೋನಿಕ್ಸ್ ಸಂಸ್ಥೆಯು ದರಗಳ ಪರಾಮರ್ಶೆಯ ನಂತರ ಮೆ॥ ಜಿಲ್ ಇನ್‌ಫಾರ್ಮಮಶನ್ ಟೆಕ್ನಾಲಜಿ, ಬೆಂಗಳೂರು ಇವರಿಗೆ ರೂ. 2,65,79,644/– ಗಳಿಗೆ ಕಾರ್ಯದೇಶವನ್ನು ನೀಡಲಾಗಿರುತ್ತದೆ ಹಾಗೂ ಮೆ॥ ಗೌರ್ & ನಾಗಿ ಲಿಮಿಟೆಡ್ ಇವರಿಂದ 3ನೇ ಪಾರ್ಟಿ ಪರಿಶೀಲನೆಯನ್ನು ಮಾಡಿಸಿ, ಅದರ ವರದಿಯನ್ನು ರಿಮ್ಸ್ ಕಾರ್ಯಾಲಯಕ್ಕೆ ದಿನಾಂಕ 11.08.2014 ರಂದು ಸಲ್ಲಿಸಿರುತ್ತಾರೆ. ಆದರೆ 3ನೇ ಪಾರ್ಟಿ ಪರಿಶೀಲನೆಯನ್ನು ಜರುಗಿಸಿದ ಕುರಿತು ಸಂಸ್ಥೆಯ ಅಧಿಕಾರಿ / ಸಿಬ್ಬಂದಿಗಳ ಸಮ್ಮುಖದಲ್ಲಿ ಜರುಗಿಸಿದ ಕುರಿತು ಯಾವುದೇ ಪುರಾವೆ ಮತ್ತು ಮಾಹಿತಿ ಲಭ್ಯವಿರುವುದಿಲ್ಲ.

ಸದರಿ ಟೆಂಡರ್‌ದಾರರಿಗೆ ಕಾಮಗಾರಿಯ ಪ್ರಗತಿಗೆ ತಕ್ಕಂತೆ ಮತ್ತು ಕಿಯೋನಿಕ್ಸ್ ಸಂಸ್ಥೆಯ ಮನವಿ ಮೇರೆಗೆ ಇಲ್ಲಿಯವರೆಗೆ ಮೆ॥ ಜಿಲ್ ಇನ್‌ಫಾರ್ಮಮಶನ್ ಟೆಕ್ನಾಲಜಿ, ಬೆಂಗಳೂರು ಇವರಿಗೆ ಒಟ್ಟು ರೂ. 2,38,25,049/– ಗಳ ಬಿಲ್ಲನ್ನು ಪಾವತಿಸಲಾಗಿರುತ್ತದೆ.

ಸದರಿ ಉಪಕರಣಗಳನ್ನು ಅಳವಡಿಸಿ ಸುಮಾರು 04 ವರ್ಷಗಳಾಗಿರುವುದರಿಂದ ಹಾಗೂ ಉಪಕರಣಗಳ ವಾರೆಂಟಿ ಅವಧಿಯು ಪೂರ್ಣಗೊಂಡಿರುವುದರಿಂದ ದಿ.23.01.2016 ರ ಪತ್ರದ ಮೂಲಕ ಮೆ॥ ಜಿಲ್ ಇನ್‌ಫಾರ್ಮೇಶನ್ ಟೆಕ್ನಾಲಜಿಸ್, ಬೆಂಗಳೂರು ಇವರು ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಸಿಸಿಟಿವಿ, ಡಾಟ ನೆಟ್‌ವರ್ಕಿಂಗ್, ಪಬ್ಲಿಕ್ ಅರ್ಡಸ್ ಸಿಸ್ಟಮ್ ಮತ್ತು ಐಪಿಬಿಎಕ್ಸ್‌ಗಳನ್ನು ಸಂಪೂರ್ಣವಾಗಿ ಅಳವಡಿಸಲಾಗಿದ್ದು, ಸದರಿ ಸಂಸ್ಥೆಯಲ್ಲಿ ಪದೇ ಪದೇ ವಿದ್ಯುತ್ ಲೋಡ್ ಶೆಡ್ಡಿಂಗ್ ಆಗುತ್ತಿರುವುದರಿಂದ ಉಪಕರಣಗಳಿಗೆ ಹಾನಿಯಾಗುತ್ತಿದ್ದು, ಸದರಿ ಉಪಕರಣಗಳು ಸರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಯೂಪಿಎಸ್‌ಗಳ ಅವಶ್ಯಕತೆಯಿದೆಯಂದು ತಿಳಿಸಿರುತ್ತಾರೆ. ಹಾಗೂ ಒಟ್ಟು 206 ಕ್ಯಾಮರಾಗಳಲ್ಲಿ 137 ಕ್ಯಾಮರಗಳು ಕಾರ್ಯನಿರ್ವಹಿಸುತ್ತಿದ್ದು, ಉಳಿದ ಕ್ಯಾಮರಾಗಳು ದುರಸ್ಥಿಯಿರುವುದಾಗಿ ತಿಳಿಸಿರುತ್ತಾರೆ.

Director
RIMS, Raichur

ಈ ಕಾರ್ಯಾಲಯದ ಪತ್ರ ಸಂಖ್ಯೆ. ರಿಮ್ಸ್ / ಸಾಮಾನ್ಯ / 2015–16 ದಿನಾಂಕ 04.04.2017 ರನ್ವಯ ಮೆ॥ ಜಿಲ್ ಇನ್‌ಫಾರ್ಮೇಶನ್ ಟೆಕ್ನಾಲಜಿಸ್ ಇವರಿಗೆ ಪತ್ರ ಬರೆದು ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು ಇವರ ಕೋರಿಕೆಯಂತೆ ಖುದ್ದು ಭೇಟಿ ನೀಡಿ ಐಪಿ ಪೋನ್ ಮತ್ತು ಸಿಸಿಟಿವಿಗಳನ್ನು ಪರಿಶೀಲಿಸಿ, ದುರಸ್ಥಿಗೆ ಕ್ರಮ ಜರುಗಿಸುವಂತೆ ಕೋರಲಾಗಿತ್ತು. ದಿ.21.04.2017 ರ ಪತ್ರದಲ್ಲಿ ಮೆ॥ ಜಿಲ್ ಇನ್‌ಫಾರ್ಮೇಶನ್ ಟೆಕ್ನಾಲಜಿಸ್ ಇವರು ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಸಿಸಿಟಿವಿ, ಡಾಟ ನೆಟ್‌ವರ್ಕಿಂಗ್, ಪಬ್ಲಿಕ್ ಅರ್ಡಸ್ ಸಿಸ್ಟಮ್ ಮತ್ತು ಐಪಿಬಿಎಕ್ಸ್‌ಗಳ ಸುರಕ್ಷತೆಯ ಹಿತದೃಷ್ಟಿಯಿಂದ ಆನ್‌ಲೈನ್ ಯೂಪಿಎಸ್‌ಗಳನ್ನು ಅಳವಡಿಸುವುದು ಸೂಕ್ತವೆಂದು ವರದಿಯನ್ನು ಸಲ್ಲಿಸಿರುತ್ತಾರೆ.

ಈ ಕಾರ್ಯಾಲಯದ ಪತ್ರ ಸಂಖ್ಯೆ. ರಿಮ್ಸ್ / ಸಾಮಾನ್ಯ / ಟೆಂಡರ್ / 2017–18 / 20 ದಿನಾಂಕ 26.04.2017 ರನ್ವಯ ಮೆ॥ ಜಿಲ್ ಇನ್‌ಫಾರ್ಮೇಶನ್ ಟೆಕ್ನಾಲಜಿಸ್ ಇವರು ಕೋರಿರುವಂತೆ ಸದರಿಯವರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ, ಆಸ್ಪತ್ರೆಯಲ್ಲಿ ಅಳವಡಿಸಲಾಗಿರುವ ಉಪಕರಣಗಳ ಸುರಕ್ಷತೆಯ ಹಿತದೃಷ್ಟಿಯಿಂದ ಆಸ್ಪತ್ರೆ ನೆಲಮಹಡಿಯಿಂದ ಆರನೇ ಮಹಡಿಯವರೆಗೆ 5 ಕೆವಿ ಸಾಮಾರ್ಥ್ಯದ ಆನ್‌ಲೈನ್ ಯೂಪಿಎಸ್‌ಗಳನ್ನು ಡಿಜಿಎಸ್ & ಡಿ ದರದಲ್ಲಿ ಖರೀದಿಸಿ ಅಳವಡಿಸಲು ಅನುಮತಿಯನ್ನು ನೀಡುವಂತೆ ಏಕ ಕಡತದಲ್ಲಿ ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಬೆಂಗಳೂರು ಇವರನ್ನು ಕೋರಲಾಗಿತ್ತು. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಏಕ ಕಡತದಲ್ಲಿ ಅನುಮೋದನೆಯನ್ನು ನೀಡಿದ ನಂತರ 5 ಕೆವಿ ಸಾಮಾರ್ಥ್ಯದ ಆನ್‌ಲೈನ್ ಯೂಪಿಎಸ್‌ಗಳನ್ನು ಡಿಜಿಎಸ್ & ಡಿ ದರದಲ್ಲಿ ಖರೀದಿಸಿ ರಿಮ್ಸ್ ಬೋಧಕ ಆಸ್ಪತ್ರೆಗೆ ಪೂರೈಸಲಾಗಿರುತ್ತದೆ.

ಈ ಕಾರ್ಯಾಲಯದ ಪತ್ರ ಸಂಖ್ಯೆ. ರಿಮ್ಸ್/ಸಾಮಾನ್ಯ/ 2017–18/20 ದಿನಾಂಕ 03.08.2017 ರನ್ವಯ ಮೆ॥ ಜಿಲ್ ಇನ್‌ಫಾರ್ಮೇಶನ್ ಟೆಕ್ನಾಲಜಿಸ್, ಬೆಂಗಳೂರು ಇವರಿಗೆ ಪತ್ರ ಬರೆದು ತಮ್ಮ ಕೋರಿಕೆಯಂತೆ ಈಗಾಗಲೇ ಪ್ರತಿ ಮಹಡಿಗೆ ಒಂದರಂತೆ ಒಟ್ಟು 07 ಐದು ಕೆವಿ ಸಾಮಾರ್ಥ್ಯದ ಆನ್‌ಲೈನ್ ಯೂಪಿಎಸ್‌ಗಳನ್ನು ಖರೀದಿಸಿ ಈಗಾಗಲೇ ಅಳವಡಿಸಲಾಗಿರುತ್ತದೆ. ಆದರೆ ಪದೇ ಪದೇ ಸಿಸಿಟಿವಿ ಕ್ಯಾಮರಗಳು ದುರಸ್ಥಿಗೆ ಬರುತ್ತಿರುವುದರಿಂದ ಈ ಕಾರ್ಯಾಲಯದ ಪತ್ರ ಸಂಖ್ಯೆ. ರಿಮ್ಸ್ / ಸಾಮಾನ್ಯ / 2017–18 / 20 ದಿನಾಂಕ 11.10.2017 ಮೆ॥ ಜಿಲ್ ಇನ್‌ಫಾರ್ಮೇಶ್‌ನ ಟೆಕ್ನಾಲಜಿಸ್ ಇವರಿಗೆ ಪತ್ರ ಬರೆಯಲಾಗಿ, ಆಸ್ಪತ್ರೆಯಲ್ಲಿನ ಉಪಕರಣಗಳ ಸುರಕ್ಷತೆ ಮತ್ತು ಭದ್ರತೆಯ ಹಿತದೃಷ್ಟಿಯಿಂದ ದುರಸ್ಥಿಯಲ್ಲಿರುವ ಸಿಸಿ ಕ್ಯಾಮರಗಳು ಮತ್ತು ಐಪಿಬಿಎಕ್ಸ್ ಉಪಕರಣಗಳನ್ನು ದುರಸ್ಥಿ ಮಾಡುವ ಸಂಬಂಧ ತಗುಲಬಹುದಾದ ಅಂದಾಜು ವೆಚ್ಚದ ಬಗ್ಗೆ ವಿವರವಾದ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಕೋರಲಾಗಿತ್ತು.

ಸದರಿಯವರು ಈವರೆಗೆ 3 ಬಾರಿ ತಮ್ಮ ಕಂಪನಿ ವತಿಯಿಂದ ಸಿಬ್ಬಂದಿಗಳನ್ನು ನಿಯೋಜಿಸಿ, ಸರ್ವೆ ಕಾರ್ಯವನ್ನು ಜರುಗಿಸಿ ದಿನಾಂಕ 05.09.2018 ರಂದು ಆಸ್ಪತ್ರೆಯಲ್ಲಿ ಅಳವಡಿಸಲಾಗಿರುವ ಡಾಟ ನೆಟ್‌ವರ್ಕಿಂಗ್ ಹಾಗೂ ಕ್ಯಾಮರಾಗಳ ದುರಸ್ಥಿ ಕಾರ್ಯದ ಬಗ್ಗೆ ಒಟ್ಟು ರೂ. 34,59,000/– (ಜಿಎಸ್‌ಟಿ ಪ್ರತ್ಯೇಕ) ಗಳನ್ನು ರಿಮ್ಸ್ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ ದುರಸ್ಥಿ ಕಾರ್ಯವು ರಿಮ್ಸ್ ಬೋದಕ ಆಸ್ಪತ್ರೆಗೆ ಸಂಬಂಧಿಸಿರುವುದರಿಂದ ಈ ವೆಚ್ಚವನ್ನು ನಿರ್ಭಯ ಯೋಜನೆ ಅಡಿಯಲ್ಲಿ ಬಿಡುಗಡೆಯಾಗುವ ಅನುದಾನದಿಂದ ಭರಿಸಬಹುದಾಗಿರುತ್ತದೆ.

ಕಾರಣ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಆಗು ಹೂಗುವ ಚಲನವಲನಗಳು, ಹೊರಗಿನ ಚಲನ ವಲನಗಳನ್ನು ಗಮನಿಸಲು ಮತ್ತು ಆಸ್ಪತ್ರೆಯಲ್ಲಿ ಶಿಸ್ತನ್ನು ಕಾಪಾಡಲು ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಸಿಸಿಟಿವಿ, ಡಾಟ ನೆಟ್‌ವರ್ಕಿಂಗ್, ಪಬ್ಲಿಕ್ ಅರ್ಡಸ್ ಸಿಸ್ಟಮ್ ಮತ್ತು ಇಪಿಬಿಎಕ್ಸ್ ಉಪಕರಣಗಳನ್ನು ಆಸ್ಪತ್ರೆಯ ಸುರಕ್ಷತೆಯ ಹಿತದೃಷಿಯಿಂದ ದೊಡ್ಡ ಮೊತ್ತದ ಅನುದಾನವನ್ನು ಬಳಸಿ, ಉಪಕರಣಗಳನ್ನು ಅಳವಡಿಸಲಾಗಿರುವುದರಿಂದ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ದುರಸ್ಥಿಯಲ್ಲಿರುವ ಡಾಟ ನೆಟ್‌ವರ್ಕಿಂಗ್ ಹಾಗೂ ಕ್ಯಾಮರಾಗಳ ದುರಸ್ಥಿ ಕಾರ್ಯವನ್ನು ಕೈಗೊಳ್ಳಲು ರೂ. 34,59,000/– (ಜಿಎಸ್‌ಟಿ ಪ್ರತ್ಯೇಕ) ಗಳಿಗೆ ಅನುಮೋದನೆ ನೀಡಿ ಮತ್ತು ಈ ವೆಚ್ಚವನ್ನು ನಿರ್ಭಯ ಯೋಜನೆ ಅಡಿಯಲ್ಲಿ ಬಿಡುಗಡೆಯಾಗುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

Director
RIMS, Raichur

**ಸಭೆಯ ತೀರ್ಮಾನ :-**

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಕಿಯೋನಿಕ್ಸ್ ಸಂಸ್ಥೆಯ ಮುಖಾಂತರ ಈಗಾಗಲೇ ಅಳವಡಿಸಲಾಗಿರುವ ಸಿಸಿಟಿವಿ, ಡಾಟ ನೆಟ್‌ವರ್ಕ, ಪಬ್ಲಿಕ್ ಅಡ್ರಸ್ ಸಿಸ್ಟಮ್ ಹಾಗೂ ಐಪಿಬಿಎಕ್ಸ್ ಗಳ ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇರುವುದರಿಂದ, ಟೆಂಡರ್‌ದಾರರಾದ ಮೆ॥ ಜಿಲ್ ಇನ್‌ಫಾರ್ಮೇಶನ್ ಟೆಕ್ನಾಲಜಿ, ಬೆಂಗಳೂರು ಇವರ ಟೆಂಡರ್‌ನ್ನು ಬ್ಲಾಕ್ ಪಟ್ಟಿಗೆ ಸೇರಿಸುವ ಬಗ್ಗೆ ವಿವರವಾದ ಮಾಹಿತಿಯನ್ನು ಕಿಯೋನಿಕ್ಸ್ ಸಂಸ್ಥೆಗೆ ಸಲ್ಲಿಸಿ ಅದರ ಒಂದು ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಲಾಯಿತು.

ಇ- ಹಾಸ್ಪಿಟಲ್‌ನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ರಿಮ್ಸ್ ಬೋದಕ ಆಸ್ಪತ್ರೆಯಲ್ಲಿ ಪ್ರತ್ಯೇಕ ಲಾನ್ ಕೇಬಲ್‌ನ್ನು ನಿಯಮಾನುಸಾರ ಅಳವಡಿಸಿಕೊಳ್ಳಲು ಅನುಮೋದನೆ ನೀಡಲಾಯಿತು. ಇದಕ್ಕೆ ತಗುಲುವ ವೆಚ್ಚವನ್ನು ನಿರ್ಭಯ ಯೋಜನೆ ಅಡಿಯಲ್ಲಿ ಭರಿಸಲು ಅನುಮತಿ ನೀಡಲಾಯಿತು.

| | |
|---|---|
| ವಿಷಯ ಸೂಚಿ<br>ಸಂಖ್ಯೆ – 15 | ರಿಮ್ಸ್ ಬೋಧಕ ಆಸ್ಪತ್ರೆಗೆ **Auto floor scrubber and drier** ಉಪಕರಣಗಳನ್ನು ಕೆ.ಟಿಪಿ.ಪಿ ಕಾಯ್ದೆಯನ್ವಯ ನಿಯಮಾನುಸಾರ ಖರೀದಿಸಲು ಅನುಮತಿ ನೀಡುವ ಕುರಿತು. |

ರಿಮ್ಸ್ ಬೋದಕ ಆಸ್ಪತ್ರೆಯಲ್ಲಿರುವ ಒಟ್ಟು 06 ಮಹಡಿಗಳಿದ್ದು, ಆಸ್ಪತ್ರೆಯಲ್ಲಿ ಎಲ್ಲಾ ವಾರ್ಡ್‌ಗಳಲ್ಲಿ ಸಿಬ್ಬಂದಿಗಳ ಮೂಲಕ ಸ್ವಚ್ಚತೆಯನ್ನು ಮಾಡಲಾಗುತ್ತಿದೆ. ಆದರೆ ಕಾಯಕಲ್ಪ ಮತ್ತು ಲಕ್ಷ್ಯ ಯೋಜನೆ ಅಡಿಯಲ್ಲಿ ಆಸ್ಪತ್ರೆಯ ವಾರ್ಡ್, ಓಟಿ, ಐಸಿಯು ಮತ್ತು ಎಲ್ಲಾ ವಿಭಾಗಗಳ ಓಪಿಡಿಗಳ ನೆಲದ ಸಂಪೂರ್ಣ ಸ್ವಚ್ಚತೆಯನ್ನು ಕಾಪಾಡಲು **Auto floor scrubber and drier** ಉಪಕರಣಗಳನ್ನು ಬಳಕೆ ಮಾಡುವಂತೆ ನಿರ್ದೇಶನ ನೀಡಲಾಗಿರುತ್ತದೆ. ಈ ಹಿನ್ನಲೆಯಲ್ಲಿ ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು ಇವರು ಪತ್ರ ಸಂಖ್ಯೆ. ರಿಮ್ಸ್‌ಬೋಆರಾ / 601 / 2018–19 ದಿನಾಂಕ 24.09.2018 ರನ್ವಯ ಒಟ್ಟು **Auto floor scrubber and drier** ಉಪಕರಣಗಳನ್ನು ಒದಗಿಸುವಂತೆ ಕೋರಿರುತ್ತಾರೆ. ಸದರಿ ಉಪಕರಣಗಳನ್ನು ಖರೀದಿಸಲು ಪ್ರತಿ ಉಪಕರಣಕ್ಕೆ ಅಂದಾಜು ರೂ. 2.00 ಲಕ್ಷಗಳಾಗುವ ಸಾಧ್ಯತೆಯಿರುತ್ತದೆ. ಸದರಿ ಉಪಕರಣಗಳನ್ನು ಖರೀದಿಸಲು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ಖಾತೆಯಲ್ಲಿ ಅನುದಾನ ಲಭ್ಯವಿರುತ್ತದೆ.

ಕಾರಣ ಕಾಯಕಲ್ಪ ಮತ್ತು ಲಕ್ಷ್ಯಾ ಯೋಜನೆಯ ನಿರ್ದೇಶನದಂತೆ ರಿಮ್ಸ್ ಬೋಧಕ ಆಸ್ಪತ್ರೆಯ ವಾರ್ಡ್, ಓಟಿ, ಐಸಿಯು ಮತ್ತು ಎಲ್ಲಾ ವಿಭಾಗಗಳ ಓಪಿಡಿಗಳ ನೆಲದ ಸಂಪೂರ್ಣ ಸ್ವಚ್ಚತೆಯನ್ನು ಕಾಪಾಡಲು ಅವಶ್ಯವಿರುವ ಒಟ್ಟು 04 **Auto floor scrubber and drier** ಉಪಕರಣಗಳನ್ನು ನಿಯಮಾನುಸಾರ ಖರೀದಿಸಲು ಹಾಗೂ ಈ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ಖಾತೆಯಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :-**

ಕಾಯಕಲ್ಪ ಮತ್ತು ಲಕ್ಷ್ಯಾ ಯೋಜನೆಯ ನಿರ್ದೇಶನದಂತೆ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿನ ವಾರ್ಡ್, ಓಟಿ, ಐಸಿಯು ಮತ್ತು ಎಲ್ಲಾ ವಿಭಾಗಗಳ ಓಪಿಡಿಗಳ ನೆಲದ ಸಂಪೂರ್ಣ ಸ್ವಚ್ಚತೆಯನ್ನು ಕಾಪಾಡಲು ಅವಶ್ಯವಿರುವ ಒಟ್ಟು 04 **Auto floor scrubber and drier** ಉಪಕರಣಗಳನ್ನು ನಿಯಮಾನುಸಾರ ಖರೀದಿಸಲು ಅನುಮತಿಯನ್ನು ನೀಡಿ, ಇದಕ್ಕೆ ತಗುಲುವ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ಖಾತೆಯಿಂದ ಭರಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

Director
RIMS, Raichur

| ವಿಷಯ ಸೂಚಿ ಸಂಖ್ಯೆ – 16 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಪುರುಷ ಗೃಹ ವೈದ್ಯರ ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸಲು ಅವಶ್ಯವಿರುವ ಹೆಚ್ಚುವರಿ ಕಾಮಗಾರಿಗಳ ರೇಖಾ ಅಂದಾಜು ಪಟ್ಟಿಗೆ ಅನುಮೋದನೆ ನೀಡುವ ಬಗ್ಗೆ. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವೈದ್ಯಕೀಯ ಪ್ರವೇಶ ಮಿತಿಯನ್ನು 100 ರಿಂದ 150 ಕ್ಕೆ ಹೆಚ್ಚಳ ಮಾಡಲಾಗಿದ್ದು, ಭಾರತೀಯ ವೈದ್ಯಕೀಯ ಮಂಡಳಿಯ ಮಾನದಂಡಗಳನ್ನು ಪೂರೈಸಲು ಅವಶ್ಯವಿರುವ ಹೆಚ್ಚುವರಿ ಕಾಮಗಾರಿಗಳನ್ನು ಕೈಗೊಳ್ಳುವುದು ಅವಶ್ಯಕತೆಯಿದ್ದುದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆ ಅಡಿಯಲ್ಲಿ ಪುರುಷ ಗೃಹ ವೈದ್ಯರ ಕಟ್ಟಡ ಕಾಮಗಾರಿಯನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ. ಆಕುಕ / 30 / ಎಂಎಂಇ / 2018 ದಿನಾಂಕ 20.03.2018 ರಲ್ಲಿ ರೂ. 825.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ.

ಸಹಾಯಕ ಕಾರ್ಯನಿರ್ವಾಹಕ ಇಂಜೀನಿಯರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನೀಯರಿಂಗ್ ಉಪವಿಭಾಗ, ರಾಯಚೂರು ಇವರು ದಿನಾಂಕ : 04.08.2018 ಜಿ + 6 ಮಹಡಿಗೆ ಡಿಸೈನ್‌ನ್ನು ಮಾಡಲಾಗಿದ್ದು, ಅನುದಾನದ ಕೊರತೆಯಿಂದ ಪಾರ್ಕಿಂಗ್ ಮತ್ತು ನೆಲಮಹಡಿ ನಿರ್ಮಿಸುವ ಕಾಮಗಾರಿಯು ಪ್ರಗತಿಯಲ್ಲಿದ್ದು, ಈಗಾಗಲೇ ಸರ್ಕಾರದ ಆದೇಶ ಸಂಖ್ಯೆ. ಆಕುಕ / 30 / ಎಂಎಂಇ / 2018 ದಿನಾಂಕ 20.03.2018 ರನ್ವಯ ಆಡಳಿತಾತ್ಮಕ ಅನುಮೋದನೆ ನೀಡಿರುವ ರೂ. 825.00 ಲಕ್ಷಗಳ ಮೊತ್ತವು ಬೇಸ್‌ಮೆಂಟ್ + ನೆಲಮಹಡಿ ಹಾಗೂ ಕಿಚನ್ ಬ್ಲಾಕ್‌ಗೆ ಸರಿಹೋಗುವುದರಿಂದ, ಇನ್ನುಳಿದ ಮೊದಲನೇ ಮಹಡಿಯಿಂದ ಐದನೇ ಮಹಡಿಯವರೆಗೆ, ಐದನೇ ಮಹಡಿಯ ಮೇಲ್ ಭಾಗದಲ್ಲಿ ಲಿಫ್ಟ್‌ಗಳ ಕೊಠಡಿ, ಸಿಂಟೆಕ್ಸ್‌ಗಳನ್ನು ಅಳವಡಿಸುವುದು ಇತ್ಯಾದಿಗೆ ಇನ್ನು ರೂ. 20,00,00,000/– ಗಳ ಅವಶ್ಯಕತೆಯಿರುತ್ತದೆಯಂದು ತಿಳಿಸಿ, ರೂ. 20,00,00,000/– ಗಳ ಮೊತ್ತಕ್ಕೆ ರೇಖಾ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿ ರಿಮ್ಸ್ ಕಾರ್ಯಲಯಕ್ಕೆ ದಿನಾಂಕ : 04.08.2018 ರಂದು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆಯುವ ಸಂಬಂಧ ವಿವರವಾದ ಪ್ರಸ್ತಾವನೆಯನ್ನು ಈ ಕಾರ್ಯಲಯದ ಪತ್ರ ಸಂಖ್ಯೆ ರಿಮ್ಸ್ / ಸಾಮಾನ್ಯ / ಅಭಿವೃದ್ಧಿ / 2018–19 / 52 ದಿನಾಂಕ 04.08.2018 ರನ್ವಯ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಸರ್ಕಾರವು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸದರಿ ಕಾಮಗಾರಿಯನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಯಾವುದೇ ಅನುದಾನ ಲಭ್ಯವಿಲ್ಲದಿರುವುದರಿಂದ, ಈ ಕಾಮಗಾರಿಯನ್ನು ಕೈಗೊಳ್ಳಲು ಸಂಸ್ಥೆಯಲ್ಲಿ ಅನುದಾನ ಲಭ್ಯವಿದ್ದಲ್ಲಿ ಅಥವಾ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಪಡೆಯುವ ಬಗ್ಗೆ ಕ್ರಮ ವಹಿಸುವಂತೆ ಸೂಚಿಸಲಾಗಿರುತ್ತದೆ. ಆದರೆ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಸಂಸ್ಥೆಯಲ್ಲಿ ಅನುದಾನ ಲಭ್ಯವಿರುವುದಿಲ್ಲ.

ಕಾರಣ ಸದರಿ ಅಂಶವನ್ನು ಆರ್ಥಿಕ ಸಮಿತಿ ಸಭೆಯ ಅವಗಾಹನೆಗೆ ಸಲ್ಲಿಸಿ, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಪುರುಷ ಗೃಹ ವೈದ್ಯರ ವಸತಿ ಸಮುಚ್ಚಯದ ಕಟ್ಟಡವನ್ನು ಪೂರ್ಣಗೊಳಿಸಲು ಅವಶ್ಯವಿರುವ ಕಾಮಗಾರಿಗಳನ್ನು ಕೈಗೊಳ್ಳಲು ರೂ. 20,00,00,000/– ಗಳ ರೇಖಾ ಅಂದಾಜು ಪಟ್ಟಿಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :–**

ರಿಮ್ಸ್ ಸಂಸ್ಥೆಯ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಪುರುಷ ಗೃಹ ವೈದ್ಯರ ಕಟ್ಟಡವನ್ನು ಈಗಾಗಲೇ ನೀಡಿರುವ ಟೆಂಡರ್‌ನ ಮೊತ್ತವು ಬೇಸ್‌ಮೆಂಟ್ + ನೆಲಮಹಡಿ ಹಾಗೂ ಕಿಚನ್ ಬ್ಲಾಕ್‌ಗೆ ಸರಿಹೋಗುವುದರಿಂದ, ಪ್ರಸಕ್ತ ಸಾಲಿಗೆ ಮೊದಲನೇ ಹಂತದಲ್ಲಿ ಮೊದಲನೇ ಮಹಡಿಯಿಂದ ಮೂರನೇ ಮಹಡಿಯವರೆಗೆ ಕಾಮಗಾರಿಯನ್ನು ಸೀಮಿತಗೊಳಿಸಿ, ಮೊದಲನೇ ಮಹಡಿಯಿಂದ 3ನೇ ಮಹಡಿಯನ್ನು ನಿರ್ಮಿಸಲು ಅವಶ್ಯವಿರುವ ಅಂದಾಜು ಪಟ್ಟಿಯನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ಇವರಿಂದ ಪಡೆದು ಕೂಡಲೇ ಸರ್ಕಾರದ ಅನುಮೋದನೆಗೆ ಸಲ್ಲಿಸುವಂತೆ ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.



Director
RIMS, Raichur

| ವಿಷಯ ಸೂಚಿ ಸಂಖ್ಯೆ – 17 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಮಹಿಳಾ ಗೃಹ ವೈದ್ಯರ ಕಟ್ಟಡ ಕಾಮಗಾರಿಯನ್ನು ನಿರ್ಮಾಣ ಮಾಡಲು ಅವಶ್ಯವಿರುವ ರೇಖಾ ಅಂದಾಜು ಪಟ್ಟಿಗೆ ಅನುಮೋದನೆ ನೀಡುವ ಬಗ್ಗೆ. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ ಈಗಾಗಲೇ ಪುರುಷ ಗೃಹ ವೈದ್ಯರ ಕಟ್ಟಡ ಕಾಮಗಾರಿಯನ್ನು ನಿರ್ಮಾಣ ಮಾಡಲಾಗುತ್ತಿದ್ದು, ಅದರಂತೆ ಇನ್ನು ಮಹಿಳಾ ಗೃಹ ವೈದ್ಯರ ಕಟ್ಟಡ ಕಾಮಗಾರಿಯನ್ನು ನಿರ್ಮಾಣ ಮಾಡಬೇಕಾಗಿರುತ್ತದೆ. ಮಹಿಳಾ ಗೃಹ ವೈದ್ಯರ ಕಟ್ಟಡ ಕಾಮಗಾರಿಯನ್ನು ನಿರ್ಮಾಣ ಮಾಡಿದಲ್ಲಿ ರೆಸಿಡೆಂಟ್ಸ್ ವಸತಿ ಗೃಹಗಳ ಆಕ್ಷೇಪಣೆಯನ್ನು ಸರಿಪಡಿಸಿದಂತಾಗುತ್ತದೆ.

ಈ ಹಿನ್ನಲೆಯಲ್ಲಿ ಈ ಕಾರ್ಯಲಯದ ಪತ್ರ ಸಂಖ್ಯೆ ರಿಮ್ಸ್ / ಸಾಮಾನ್ಯ / ಅಭಿವೃದ್ಧಿ / 2018–19 / 111 ದಿ.31.07.2018 ರನ್ವಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನೀಯರಿಂಗ್ ಉಪವಿಭಾಗ, ರಾಯಚೂರು ಇವರಿಗೆ ಮಹಿಳಾ ಗೃಹ ವೈದ್ಯರ ಕಟ್ಟಡ ಕಾಮಗಾರಿಯನ್ನು ನಿರ್ಮಾಣ ಮಾಡಲು ಅವಶ್ಯವಿರುವ ರೇಖಾ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಕೋರಲಾಗಿತ್ತು

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನೀಯರಿಂಗ್ ಉಪವಿಭಾಗ, ರಾಯಚೂರು ಇವರು ದಿನಾಂಕ 04.08.2018 ರ ಪತ್ರದಲ್ಲಿ ರಿಮ್ಸ್ ಸಂಸ್ಥೆಯ ಆವರಣದಲ್ಲಿ ಮಹಿಳಾ ಗೃಹ ವೈದ್ಯರ ಕಟ್ಟಡ ಕಾಮಗಾರಿಯನ್ನು ನಿರ್ಮಾಣ ಮಾಡಲು ಒಟ್ಟು ರೂ. 30,00,00,000/– ಗಳ ರೇಖಾ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿ, ದಿನಾಂಕ 04.08.2018 ರಂದು ರಿಮ್ಸ್ ಕಾರ್ಯಲಯಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆಯುವ ಸಂಬಂಧ ವಿವರವಾದ ಪ್ರಸ್ತಾವನೆಯನ್ನು ಈ ಕಾರ್ಯಲಯದ ಪತ್ರ ಸಂಖ್ಯೆ ರಿಮ್ಸ್ / ಸಾಮಾನ್ಯ / ಅಭಿವೃದ್ಧಿ / 2018–19 / 111 ದಿನಾಂಕ 04.08.2018 ರನ್ವಯ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಸರ್ಕಾರವು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸದರಿ ಕಾಮಗಾರಿಯನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಯಾವುದೇ ಅನುದಾನ ಲಭ್ಯವಿಲ್ಲದಿರುವುದರಿಂದ, ಈ ಕಾಮಗಾರಿಯನ್ನು ಕೈಗೊಳ್ಳಲು ಸಂಸ್ಥೆಯಲ್ಲಿ ಅನುದಾನ ಲಭ್ಯವಿದ್ದಲ್ಲಿ ಅಥವಾ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಪಡೆಯುವ ಬಗ್ಗೆ ಕ್ರಮ ವಹಿಸುವಂತೆ ಸೂಚಿಸಲಾಗಿರುತ್ತದೆ. ಆದರೆ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಸಂಸ್ಥೆಯಲ್ಲಿ ಅನುದಾನ ಲಭ್ಯವಿರುವುದಿಲ್ಲ.

ಕಾರಣ ಸದರಿ ಅಂಶವನ್ನು ಆರ್ಥಿಕ ಸಮಿತಿ ಸಭೆಯ ಅವಗಾಹನೆಗೆ ಸಲ್ಲಿಸಿ, ರಿಮ್ಸ್ ಸಂಸ್ಥೆಯ ಆವರಣದಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯ ಆಕ್ಷೇಪಣೆಗಳನ್ನು ಸರಿಪಡಿಸಲು ಅವಶ್ಯವಿರುವ ಮಹಿಳಾ ಗೃಹ ವೈದ್ಯರ ವಸತಿ ಗೃಹಗಳನ್ನು ನಿರ್ಮಾಣ ಮಾಡಲು ರೂ. 30,00,00,000/– ಗಳ ರೇಖಾ ಅಂದಾಜು ಪಟ್ಟಿಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

<u>ಸಭೆಯ ತೀರ್ಮಾನ :–</u>

ರಿಮ್ಸ್ ಸಂಸ್ಥೆಯ ಆವರಣದಲ್ಲಿ ಮಹಿಳಾ ಗೃಹ ವೈದ್ಯರ ವಸತಿ ಗೃಹಗಳನ್ನು ಬೇಸ್‌ಮೆಂಟ್, ನೆಲಮಹಡಿ ಮತ್ತು ಮೊದಲನೇ ಮಹಡಿಯನ್ನು ನಿರ್ಮಾಣ ಮಾಡಲು ಬೇಕಾಗುವ ಪ್ರಸ್ತಾವನೆಯನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ಇವರಿಂದ ಪಡೆದು ಸರ್ಕಾರದ ಅನುಮೋದನೆಗೆ ಸಲ್ಲಿಸುವಂತೆ ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

Director
RIMS, Raichur

| ವಿಷಯ ಸೂಚಿ ಸಂಖ್ಯೆ – 18 | ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಲೇಡಿ ಮೆಡಿಕಲ್ ಆಫೀಸರ್‌ಗಳಿಗೆ ವಿಶೇಷ ಭತ್ಯೆ ಪಾವತಿಸಲು ಅನುಮೋದನೆ ನೀಡುವ ಬಗ್ಗೆ |
|---|---|

ಸರ್ಕಾರದ ಆದೇಶ ಸಂ. ಆಕುಕ 242 ಕೆವಿಎಂ 2016 ಬೆಂಗಳೂರು ದಿನಾಂಕ : 21.07.2018 ರನ್ವಯ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ತುರ್ತು ಚಿಕಿತ್ಸಾ ಘಟಕದ ವೈದ್ಯಾಧಿಕಾರಿಗಳಿಗೆ (ಸಿಎಂಓ / ಐಸಿಎಂಓ) ವಿಶೇಷ ಭತ್ಯೆಯನ್ನು ಮಂಜೂರು ಮಾಡಿ ಆದೇಶಿಸಿರುತ್ತದೆ. ಆದರೆ ಸರ್ಕಾರದ ಆದೇಶದಲ್ಲಿ ಸಮುದಾಯ ಆರೋಗ್ಯ ಶಾಸ್ತ್ರ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ 02 ಎಲ್‌ಎಂಓ (ಲೇಡಿ ಮೆಡಿಕಲ್ ಆಫೀಸರ್) ಗಳಿಗೆ ಭತ್ಯೆಯನ್ನು ಪಾವತಿಸುವ ಸಂಬಂಧ ಮಾಹಿತಿಯಿರುವುದಿಲ್ಲ. ಈ ಹಿನ್ನಲೆಯಲ್ಲಿ ಸಮುದಾಯ ಆರೋಗ್ಯ ಶಾಸ್ತ್ರ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಬ್ಬರು ಲೇಡಿ ಮೆಡಿಕಲ್ ಆಫೀಸರ್‌ಗಳು (ಎಲ್.ಎಂ.ಓ) ತಮಗೂ ಸಿ.ಎಂ.ಓ / ಐ.ಸಿ.ಎಂ.ಓ ಗಳಿಗೆ ಪಾವತಿಸುತ್ತಿರುವ ವಿಶೇಷ ಭತ್ಯೆಯನ್ನು ಪಾವತಿಸುವಂತೆ ಮನವಿಯನ್ನು ಮಾಡಿರುತ್ತಾರೆ. ಈಗಾಗಲೇ ಮೈಸೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್.ಎಂ.ಓ ಗಳಿಗೆ ವಿಶೇಷ ಭತ್ಯೆಗಳನ್ನು ನೀಡಲಾಗುತ್ತಿದೆ.

ಸರ್ಕಾರದ ಆದೇಶದನ್ವಯ ಈಗಾಗಲೇ ಸಿ.ಎಂ.ಓ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳಿಗೆ ವಿಶೇಷ ಭತ್ಯೆಯ ವೆಚ್ಚವನ್ನು 2210 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಭರಿಸಲಾಗುತ್ತಿದೆ.

| ಸರ್ಕಾರದ ಆದೇಶ ಸಂಖ್ಯೆ | ಸೇವಾವಧಿ | ಎಂಬಿಬಿಎಸ್ / ಬಿಡಿಎಸ್ ವಿದ್ಯಾರ್ಹತೆ ಹೊಂದಿದವರಿಗೆ ತುರ್ತು ಚಿಕಿತ್ಸಾ ಭತ್ಯೆ |
|---|---|---|
| ಸಂಖ್ಯೆ ಆಕುಕ / 242 / ಕೆವಿಎಂ / 2016 ದಿನಾಂಕ : 21.07.2018 | 0–6 ವರ್ಷ ಸೇವೆ ಸಲ್ಲಿಸಿದವರಿಗೆ | ರೂ. 21,000/– |
| | 6–13 ವರ್ಷ ಸೇವೆ ಸಲ್ಲಿಸಿದವರಿಗೆ | ರೂ. 22,000/– |
| | 13–20 ವರ್ಷ ಸೇವೆ ಸಲ್ಲಿಸಿದವರಿಗೆ | ರೂ. 23,000/– |
| | ಪ್ರತಿ ವರ್ಷ ಹೆಚ್ಚಳ | ರೂ. 1,000/– |

ಸರ್ಕಾರದ ಆದೇಶ ಸಂ. ಆಕುಕ 242 ಕೆವಿಎಂ 2016 ಬೆಂಗಳೂರು ದಿನಾಂಕ : 21.07.2018 ರನ್ವಯ ತುರ್ತು ಚಿಕಿತ್ಸಾ ಘಟಕದ ವೈದ್ಯಾಧಿಕಾರಿಗಳಿಗೆ (ಸಿಎಂಓ / ಐಸಿಎಂಓ) ಪಾವತಿಸುತ್ತಿರುವ ವಿಶೇಷ ಭತ್ಯೆಯಂತೆ ಸಮುದಾಯ ಆರೋಗ್ಯ ಶಾಸ್ತ್ರ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿವ ಇಬ್ಬರು ಲೇಡಿ ಮೆಡಿಕಲ್ ಆಫೀಸರ್‌ಗಳು (ಎಲ್.ಎಂ.ಓ) ಗಳಿಗೆ ವಿಶೇಷ ಭತ್ಯೆಯನ್ನು ಮಂಜೂರು ಮಾಡಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**<u>ಸಭೆಯ ತೀರ್ಮಾನ :–</u>**

ಸರ್ಕಾರದ ಆದೇಶ ಸಂ. ಆಕುಕ 242 ಕೆವಿಎಂ 2016 ಬೆಂಗಳೂರು ದಿನಾಂಕ : 21.07.2018 ರನ್ವಯ ತುರ್ತು ಚಿಕಿತ್ಸಾ ವೈದ್ಯರಿಗೆ ಮಾತ್ರ ವಿಶೇಷ ಭತ್ಯೆಯನ್ನು ಮಂಜೂರು ಮಾಡಲು ಅನುಮತಿಯಿರುವುದರಿಂದ, ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಲೇಡಿ ಮೆಡಿಕಲ್ ಆಫೀಸರ್‌ಗಳು (ಎಲ್.ಎಂ.ಓ) ಗಳಿಗೆ ವಿಶೇಷ ಭತ್ಯೆಯನ್ನು ಮಂಜೂರು ಮಾಡುವ ಸಂಬಂಧ ಪ್ರತ್ಯೇಕ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಆರ್ಥಿಕ ಸಮಿತಿ ಸಭೆಯು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

| ವಿಷಯ ಸೂಚಿ ಸಂಖ್ಯೆ – 19 | ಎಸ್.ಆರ್.ಸಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳು ವೇತನವನ್ನು ಪರಿಷ್ಕರಿಸುವ ಕುರಿತು. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ಪೌಷ್ಠಿಕ ಆಹಾರ ಪುನಶ್ಚೇತನ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳು ವೇತನವನ್ನು ಪರಿಷ್ಕರಿಸುವಂತೆ ಮನವಿಯಲ್ಲಿ ಕೋರಿರುತ್ತಾರೆ.

Director
RIMS, Raichur

ಪ್ರಸ್ತುತ ಸರ್ಕಾರದ ಆದೇಶದನ್ವಯ ಪೌಷ್ಠಿಕ ಆಹಾರ ಪುನಶ್ಚೇತನ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳಿಗೆ ಸಂಚಿತ ವೇತನ ರೂ. 40,000/- ಗಳ ಪ್ರತಿ ಮಾಹೆಯಂತೆ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲಾಗಿದ್ದು, ಆರ್.ಒ.ಪಿ. 2015-16 ರಂತೆ ಅನುಮೋದಿತ ವೇತನ ರೂ. 45,000/- ಹಾಗೂ 2016-17ರಂತೆ ಅನುಮೋದಿತ ವೇತನ 5% ಹೆಚ್ಚಳ ಅಂದರೆ ರೂ. 47,250/- ಗಳನ್ನು (31.03.2016ಕ್ಕೆ ಒಂದು ವರ್ಷ ಪೂರೈಸಿದ ವೈದ್ಯರಿಗೆ) ನೀಡಲು ಅವಕಾಶವಿರುತ್ತದೆ.

| ಕ್ರ.ಸಂ | ವೈದ್ಯರುಗಳ ಹೆಸರು | ಪ್ರಸ್ತುತ ಪಡೆಯುತ್ತಿರುವ ವೇತನ | ಆರ್.ಒ.ಪಿ. 2015-16ಕ್ಕೆ ಅನುಮೋದಿತ ವೇತನ | ಆರ್.ಒ.ಪಿ. 2016-17ಕ್ಕೆ ಅನುಮೋದಿತ ವೇತನ (ಕಾಲಂ 4 X 5% ಹೆಚ್ಚಳ) |
|---|---|---|---|---|
| 1 | 2 | 3 | 4 | 5 |
| 1 | ಡಾ. ಟೀಕಾರಾವ್ ಮುಜುಮ್‌ದಾರ, ಎನ್.ಆರ್.ಸಿ ಮೆಡಿಕಲ್ ಆಫೀಸರ್ | ರೂ. 40,000/- | ರೂ. 45,000/- | ರೂ. 47,250/- |
| 2 | ಡಾ. ಅವಿನಾಶ ಗದ್ವಾಲ್, ಎನ್.ಆರ್.ಸಿ ಮೆಡಿಕಲ್ ಆಫೀಸರ್ | ರೂ. 40,000/- | ರೂ. 45,000/- | ರೂ. 47,250/- |

ಕಾರಣ ರಿಮ್ಸ್ ಬೋಧಕ ಆಸ್ಪತ್ರೆಯ ಎನ್.ಆರ್.ಸಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳಿಗೆ ಪರಿಷ್ಕೃತ ವೇತನವನ್ನು ನಿಗದಿಪಡಿಸಿ ಪಾವತಿಸುವ ಕುರಿತು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :-**

ರಿಮ್ಸ್ ಬೋಧಕ ಆಸ್ಪತ್ರೆಯ ಎನ್.ಆರ್.ಸಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳು ಈಗಾಗಲೇ ತಮ್ಮ ಹುದ್ದೆಗೆ ರಾಜೀನಾಮೆಯನ್ನು ನೀಡಿ ಎನ್.ಹೆಚ್.ಎಂ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಸದರಿ ವೈದ್ಯರಿಗೆ ವೇತನವನ್ನು ಹೆಚ್ಚಿಸದೇ ಇರಲು ಆರ್ಥಿಕ ಸಮಿತಿ ಸಭೆಯು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು. ಹಾಗೂ ಎನ್.ಹೆಚ್.ಎಂ ಅಡಿಯಲ್ಲಿ ಸಿಬ್ಬಂದಿಗಳಿಗೆ ನಿಗದಿಪಡಿಸಿರುವ ವೇತನದ ಮಾಹಿತಿಯನ್ನು ಸರ್ಕಾರಕ್ಕೆ ಏಕ ಕಡತದಲ್ಲಿ ಸಲ್ಲಿಸಲು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

ಹಾಗೂ ಎನ್.ಹೆಚ್.ಎಂ ಅಡಿಯಲ್ಲಿ ಒದಗಿಸಲಾಗುವ / ಒದಗಿಸಿರುವ ಅನುದಾನವನ್ನು ನಿರ್ದೇಶಕರು, ರಿಮ್ಸ್, ರಾಯಚೂರು ಇವರ ಅಧೀನಕ್ಕೆ ಒಳಪಡಿಸಲು ಆರ್ಥಿಕ ಸಮಿತಿಯು ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ - 20 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮುಖ್ಯ ಗ್ರಂಥಪಾಲಕರ ವೇತನವನ್ನು ಪರಿಷ್ಕರಿಸುವ ಕುರಿತು. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸರ್ಕಾರದಿಂದ ಒಂದು ಮುಖ್ಯ ಗ್ರಂಥಪಾಲಕ ಹುದ್ದೆಯು ಸರ್ಕಾರದ ಆದೇಶ ಸಂಖ್ಯೆ ಆಕುಕ / 266 / ಎಂಪಿಎಸ್ / 2006 ದಿನಾಂಕ 12.09.2006 ರನ್ವಯ ಮಂಜೂರಾಗಿದ್ದು, ಸಂಸ್ಥೆಯ ಮುಖ್ಯ ಗ್ರಂಥಾಲಯದ ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಓರ್ವ ಸಿಬ್ಬಂದಿಯನ್ನು ಸಂಚಿತ ವೇತನ ರೂ. 19,000/- ಗಳ ಆಧಾರದ ಮೇಲೆ ಮುಖ್ಯ ಗ್ರಂಥಪಾಲಕರನ್ನಾಗಿ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ಮುಖ್ಯ ಗ್ರಂಥಪಾಲಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯು ಎಂ.ಫಿಲ್ ಪದವಿಯನ್ನು ಹೊಂದಿದ್ದು, 17 ವರ್ಷಗಳ ಸೇವಾನುಭವ ಇರುವುದಾಗಿ ತಿಳಿಸಿ, ತಮಗೆ ನೀಡುತ್ತಿರುವ ಸಂಚಿತ ವೇತನವು ತುಂಬಾ ಕಡಿಮೆಯಿರುತ್ತದೆಯೆಂದು ತಿಳಿಸಿರುತ್ತಾರೆ. ಪ್ರಸ್ತುತ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರದಲ್ಲಿ ಮುಖ್ಯ ಗ್ರಂಥಪಾಲಕರ ಹುದ್ದೆಗೆ ಪಾವತಿಸುತ್ತಿರುವ ವೇತನವನ್ನು ಸಂಚಿತ ವೇತನದಲ್ಲಿ ಪಾವತಿಸುವಂತೆ ಮನವಿಯಲ್ಲಿ ಕೋರಿರುತ್ತಾರೆ.



Director
RIMS, Raichur

ಪ್ರಸ್ತುತ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರದಲ್ಲಿ ಮುಖ್ಯ ಗ್ರಂಥಪಾಲಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಸಿಬ್ಬಂದಿಗೆ ವೇತನ ಶ್ರೇಣಿ 15600 – 39100 (ಎ.ಜಿ.ಪಿ 9000) ಪಾವತಿಸುತ್ತಿದ್ದು ಒಟ್ಟು ರೂ. 61,500/- ವೇತನ ಪಡೆಯುತ್ತಿರುವುದಾಗಿ ಮನವಿಯಲ್ಲಿ ತಿಳಿಸಿರುತ್ತಾರೆ. ಈ ಹಿನ್ನಲೆಯಲ್ಲಿ ತಮಗೂ ಸಂಚಿತ ವೇತನವನ್ನು ಹೆಚ್ಚಳ ಮಾಡುವಂತೆ ಕೋರಿರುತ್ತಾರೆ.

ಕಾರಣ ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮುಖ್ಯ ಗ್ರಂಥಪಾಲಕರಿಗೆ ಸಂಚಿತ ವೇತನವನ್ನು ಹೆಚ್ಚಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :-**

ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮುಖ್ಯ ಗ್ರಂಥಪಾಲಕರಿಗೆ ಈಗಾಗಲೇ ನೀಡುತ್ತಿರುವ ಸಂಚಿತ ವೇತನ ರೂ. 19,000/- ಗಳ ಮೊತ್ತಕ್ಕೆ ಶೇ 10% ರಷ್ಟು ವೇತನವನ್ನು ಹೆಚ್ಚಿಸಿ ಪಾವತಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆಯನ್ನು ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 21 | ಮಕ್ಕಳ ಶಾಸ್ತ್ರ ವಿಭಾಗದಲ್ಲಿ ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹ ಪ್ರಾಧ್ಯಾಪಕರ ವೇತನವನ್ನು ಪರಿಷ್ಕರಿಸುವ ಕುರಿತು. |

ಡಾ. ಶಶಿಕಲಾ. ಪಿ ಇವರನ್ನು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಮಕ್ಕಳ ಶಾಸ್ತ್ರ ವಿಭಾಗದಲ್ಲಿ ಸಹ ಪ್ರಾಧ್ಯಾಪಕರ ಹುದ್ದೆಗೆ ಸಂಚಿತ ವೇತನ ರೂ. 80,000/- ಗಳ ಪ್ರತಿ ಮಾಹೆಯಂತೆ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ಸದರಿಯವರು ದಿನಾಂಕ 01.04.2018 ರಿಂದ ಕರ್ತವ್ಯಕ್ಕೆ ವರದಿ ಮಾಡಿಕೊಂಡು ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಭಾರತೀಯ ವೈದ್ಯಕೀಯ ಪರಿಷತ್‌ನ ನಿಯಮಾವಳಿಯಂತೆ ಮಕ್ಕಳ ಶಾಸ್ತ್ರ ವಿಭಾಗಕ್ಕೆ 02 ಸಹ ಪ್ರಾಧ್ಯಾಪಕರ ಹುದ್ದೆಗಳ ಅವಶ್ಯಕತೆಯಿದ್ದು, ಆಸ್ಪತ್ರೆಗೆ ಬರುವ ರೋಗಿಗಳ ಹಿತದೃಷ್ಟಿಯಿಂದ ಈ ಹುದ್ದೆಯನ್ನು ಭರ್ತಿ ಮಾಡುವುದು ಅತ್ಯಾವಶ್ಯಕವಾಗಿರುತ್ತದೆ. ಮಕ್ಕಳ ಶಾಸ್ತ್ರ ವಿಭಾಗದಲ್ಲಿ ಕೇವಲ ಓರ್ವ ಸಹಾಯಕ ಪ್ರಾಧ್ಯಾಪಕರು ಮಾತ್ರ ಸಹ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ಹೊಂದಲು ಅರ್ಹರಿರುವುದರಿಂದ, ಡಾ. ಶಶಿಕಲಾ.ಪಿ. ಇವರನ್ನು ಸಂಚಿತ ವೇತನದಲ್ಲಿ ತಾತ್ಕಾಲಿಕವಾಗಿ ಸಂಚಿತ ವೇತನದಲ್ಲಿ ಮುಂದುವರೆಸುವುದು ಅವಶ್ಯಕವಾಗಿರುತ್ತದೆ.

ಡಾ. ಶಶಿಕಲಾ. ಪಿ. ಇವರು ಪ್ರಸ್ತುತ ಪಡೆಯುತ್ತಿರುವ ರೂ. 80,000/- ಸಂಚಿತ ವೇತನವು ಕಡಿಮೆಯಿದ್ದು, ತಮ್ಮ ಸಂಚಿತ ವೇತನವನ್ನು ಪ್ರತಿ ಮಾಹೆ ರೂ.1,50,000/- ಗಳಿಗೆ ಹೆಚ್ಚಳ ಮಾಡುವಂತೆ ಕೋರಿರುತ್ತಾರೆ.

ಕಾರಣ ಡಾ. ಶಶಿಕಲಾ.ಪಿ. ಇವರಿಗೆ ಸಂಚಿತ ವೇತನವನ್ನು ರೂ. 80,000/- ದಿಂದ ರೂ. 1,50,000/- ಗಳಿಗೆ ಪ್ರತಿ ಮಾಹೆ ಹೆಚ್ಚಳ ಮಾಡುವ ಸಂಬಂಧ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :-**

ಡಾ. ಶಶಿಕಲಾ, ಪಿ, ಸಹ ಪ್ರಾಧ್ಯಾಪಕರು, ಮಕ್ಕಳಶಾಸ್ತ್ರ ವಿಭಾಗ ಇವರಿಗೆ ಸಂಚಿತ ವೇತನವನ್ನು ರೂ. 80,000/- ದಿಂದ ರೂ. 1,50,000/- ಗಳಿಗೆ ಹೆಚ್ಚಿಸುವ ಬಗ್ಗೆ, ಸದರಿ ವೈದ್ಯರು ನಿವೃತ್ತಿ ನಂತರ ರಿಮ್ಸ್ ಸಂಸ್ಥೆಯಲ್ಲಿ ಒಂದು ವರ್ಷ ಸೇವೆಯನ್ನು ಪೂರೈಸಿದ ನಂತರ ಆರ್ಥಿಕ ಸಮಿತಿಗೆ ಪ್ರಸ್ತಾವನೆಯನ್ನು ಪುನಃ ಸಲ್ಲಿಸಲು ಸೂಚಿಸಲಾಯಿತು.

Director
RIMS, Raichur

| | |
|---|---|
| ವಿಷಯ ಸೂಚಿ ಸಂಖ್ಯೆ – 22 | ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ ವೈದ್ಯಕೀಯ ಪ್ರವೇಶಾತಿಯನ್ನು 100 ರಿಂದ 150 ಕ್ಕೆ ಹೆಚ್ಚಿಸಿರುವುದರಿಂದ ಅವಶ್ಯವಿರುವ ಬೋಧಕೇತರ ಹುದ್ದೆಗಳನ್ನು ಸೃಜಿಸಿಕೊಳ್ಳಲು ಅನುಮತಿ ನೀಡುವ ಬಗ್ಗೆ. |

ಸರ್ಕಾರದ ಆದೇಶ ಸಂಖ್ಯೆ ಆಕುಕ /266 / ಎಂಪಿಎಸ್ / 2006 ದಿನಾಂಕ 12.09.2006 ರನ್ವಯ 100 ವೈದ್ಯ ವಿದ್ಯಾರ್ಥಿಗಳ ಪ್ರವೇಶಾತಿಗೆ ಅವಶ್ಯವಿರುವ 523 ಬೋಧಕೇತರ ಸಿಬ್ಬಂದಿ ಹುದ್ದೆಗಳನ್ನು ರಿಮ್ಸ್ ವೈದ್ಯಕೀಯ ಕಾಲೇಜಿಗೆ ಮಂಜೂರು ಮಾಡಲಾಗಿರುತ್ತದೆ. ಆದರೆ ಪ್ರಸ್ತುತ ವೈದ್ಯಕೀಯ ಪ್ರವೇಶಾತಿಯನ್ನು 100 ರಿಂದ 150 ಕ್ಕೆ ಹೆಚ್ಚಿಸಿರುವ ಸಂಬಂಧ ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ ಒಟ್ಟು 21 ವಿವಿಧ ವಿಭಾಗಗಳು, ಕಾಲೇಜು ಹಾಗೂ ಆಸ್ಪತ್ರೆ ಸೇರಿ ಇನ್ನು 1118 ವಿವಿಧ ಬೋಧಕೇತರ ಹುದ್ದೆಗಳನ್ನು ಸೃಜಿಸಿಕೊಳ್ಳುವುದು ಅನಿವಾರ್ಯವಾಗಿರುತ್ತದೆ.

ಕಾರಣ ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ ವೈದ್ಯಕೀಯ ಪ್ರವೇಶಾತಿಯನ್ನು 100 ರಿಂದ 150 ಕ್ಕೆ ಹೆಚ್ಚಿಸಿರುವುದರಿಂದ ಪ್ರವೇಶಾತಿಗೆ ತಕ್ಕಂತೆ ಇನ್ನು ಅವಶ್ಯವಿರುವ ಒಟ್ಟು 1118 ವಿವಿಧ ಬೋಧಕೇತರ ಹುದ್ದೆಗಳನ್ನು ನಿಯಮಾನುಸಾರ ಸೃಜಿಸಿಕೊಳ್ಳಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :-**

ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ, 150 ವೈದ್ಯ ವಿದ್ಯಾರ್ಥಿಗಳ ಪ್ರವೇಶಾತಿಗೆ ಅವಶ್ಯವಿರುವ ವಿವಿಧ ಬೋಧಕೇತರ ಹುದ್ದೆಗಳ ಪ್ರಸ್ತಾವನೆಯನ್ನು ಪರಿಶೀಲಿಸಿ, ಸದರಿ ಹುದ್ದೆಗಳ ಸೃಜನೆಯ ಸಂಬಂಧ ಆರ್ಥಿಕ ಇಲಾಖೆಗೆ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆಯನ್ನು ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 23 | ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ **High end DR – Digital X-ray** ಉಪಕರಣವನ್ನು ನಿಯಮಾನುಸಾರ ಖರೀದಿಸಲು ಅನುಮೋದನೆ ನೀಡುವ ಕುರಿತು. |

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿರುವ 500 ಎಂ.ಎ ಉಪಕರಣವನ್ನು ಈ ಹಿಂದೆ ಅಪೋಲೋ ಸಮೂಹದ ನಿರ್ವಹಿಸುತ್ತಿದ್ದ ಸಮಯದಲ್ಲಿ ವಿಪ್ರೋ ಕಂಪನಿಯಿಂದ ಉಪಕರಣವನ್ನು ಖರೀದಿಸಲಾಗಿತ್ತು. ಸದರಿ ಉಪಕರಣವು ಕಳೆದ ನಾಲ್ಕು ವರ್ಷಗಳಿಂದ ದುರಸ್ಥಿಗೆ ಬಂದಿರುತ್ತದೆ. ಓಪೆಕ್ ಆಸ್ಪತ್ರೆಯಲ್ಲಿ ಯುರೋಲಜಿ, ನ್ಯೂರೋ ಸರ್ಜರಿ, ಪ್ಲಾಸ್ಟಿಕ್ ಸರ್ಜರಿ, ಪಿಡಿಯಾಟ್ರಿಕ್ ಸರ್ಜರಿ ವಿಭಾಗಗಳಿಗೆ ಸಂಬಂಧಿಸಿದಂತೆ ರೋಗಿಗಳಿಗೆ ಅನುಕೂಲವಾಗುವುದರಿಂದ ಮತ್ತು ರಿಮ್ಸ್ ಬೋಧಕ ಆಸ್ಪತ್ರೆಯಿಂದಲೂ ಸಹ ರೋಗಿಗಳನ್ನು ಎಕ್ಸ್‌ರೇ ಸಂಬಂಧ ರೆಫರ್ ಮಾಡಲಾಗುತ್ತಿದೆ. ಈ ಹಿನ್ನಲೆಯಲ್ಲಿ ಡಿಜಿಟಲ್ ಎಕ್ಸ್‌ರೇ ಉಪಕರಣವು ಅತಿ ಅವಶ್ಯಕವಾಗಿರುತ್ತದೆ.

ಈ ಹಿನ್ನಲೆಯಲ್ಲಿ ದಿನಾಂಕ 25.10.2017 ರಂದು ಜರುಗಿದ ರಿಮ್ಸ್ ಸಂಸ್ಥೆಯ 13ನೇ ಆಡಳಿತ ಮಂಡಳಿ ಸಭೆಯಲ್ಲಿ ಸದರಿ ವಿಷಯವನ್ನು ಮಂಡಿಸಲಾಗಿ ಆರ್ಥಿಕ ಸಮಿತಿ ಸಭೆಯು ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ರೇಡಿಯಾಲಜಿ ವಿಭಾಗಕ್ಕೆ ಅವಶ್ಯವಿರುವ 500ಎಂ.ಎ ಎಕ್ಸ್–ರೇ ಉಪಕರಣವನ್ನು ದುರಸ್ಥಿ ಮಾಡಿಸಲು ಹಾಗೂ 60ಎಂಎ ಮತ್ತು 100ಎಂಎ ಮೊಬೈಲ್ ಎಕ್ಸ್‌ರೇ ಉಪಕರಣಗಳನ್ನು ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಖರೀದಿಸಲು ಮತ್ತು ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210-01-110-2-37-101 ಅಡಿಯಲ್ಲಿ ಭರಿಸುವಂತೆ ಆರ್ಥಿಕ ಸಮಿತಿಯು ಅನುಮೋದನೆಯನ್ನು ನೀಡಿರುತ್ತದೆ.

ಪ್ರಸ್ತುತ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು 2ನೇ ಹಂತದಲ್ಲಿ ಮೇಲ್ದರ್ಜೆಗೇರಿಸಲಾಗತ್ತಿರುವುದರಿಂದ **High end DR – Digital X-ray** ಉಪಕರಣದ ಅವಶ್ಯಕತೆಯಿರುತ್ತದೆ. ಸದರಿ ಉಪಕರಣವನ್ನು ಖರೀದಿ ಮಾಡುವ ಸಂಬಂಧ ವಿಪ್ರೋ ಕಂಪನಿಯಿಂದ ಅಂದಾಜು ಪಟ್ಟಿಯನ್ನು ಪಡೆಯಲಾಗಿರುತ್ತದೆ. ಉಪಕರಣದ ವೆಚ್ಚ ರೂ. 90.00 ಲಕ್ಷಗಳಾಗುವ ಸಾಧ್ಯತೆಯಿರುತ್ತದೆ.



Director
RIMS, Raichur

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಲೆಕ್ಕ ಶೀರ್ಷಿಕೆ 2210-01-110-2-37-101 ಅಡಿಯಲ್ಲಿ ಕಾಲಕಾಲಕ್ಕೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಈ ಲೆಕ್ಕ ಶಿರ್ಷಿಕೆಯಲ್ಲಿ **High end DR – Digital X-ray** ಉಪಕರಣದ ಖರೀದಿಸಲು ಬೇಕಾದ ಅನುದಾನವು ಲಭ್ಯವಿರುತ್ತದೆ.

ಕಾರಣ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ **High end DR – Digital X-ray** ಉಪಕರಣವನ್ನು ಹೊಸದಾಗಿ ನಿಯಮಾನುಸಾರ ಖರೀದಿಸಲು ಹಾಗೂ ಉಪಕರಣದ ಖರೀದಿಗೆ ತಗುಲುವ ವೆಚ್ಚವನ್ನು ಲೆಕ್ಕ ಶಿರ್ಷಿಕೆ 2210-01-110-2-37-101 ಅಡಿಯಲ್ಲಿ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ **High end DR – Digital X-ray** ಉಪಕರಣವನ್ನು ನಿಯಮಾನುಸಾರ ಖರೀದಿಸಲು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಲು ಹಾಗೂ ಉಪಕರಣ ಖರೀದಿಗೆ ತಗುಲುವ ವೆಚ್ಚವನ್ನು ಲೆಕ್ಕ ಶಿರ್ಷಿಕೆ 2210-01-110-2-37-101 ಅಡಿಯಲ್ಲಿ ಲಭ್ಯವಿರುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 24 | ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಸಿಬ್ಬಂದಿಗಳ ವಸತಿ ಗೃಹಗಳ ಸುತ್ತಮುತ್ತ ಭದ್ರತೆಯ ನಿಮಿತ್ತ ಸಿಸಿ ಕ್ಯಾಮರಾಗಳನ್ನು ಅಳವಡಿಸಲು ಅನುಮೋದನೆ ನೀಡುವ ಬಗ್ಗೆ. |

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಭೇಟಿ ನೀಡುತ್ತಿರುವ ರೋಗಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದ್ದು, ಓಪೆಕ್ ಅಸ್ಪತ್ರೆಯಲ್ಲಿ ಅತಿ ಬೆಲೆ ಬಾಳುವ ಉಪಕರಣಗಳು ಇರುವುದರಿಂದ, ಸದರಿ ಉಪಕರಣಗಳ ಸುರಕ್ಷತೆ ಹಾಗೂ ಭದ್ರತೆಯ ಹಿತದೃಷ್ಟಯಿಂದ ಓಪೆಕ್ ಆಸ್ಪತ್ರೆ ಹಾಗೂ ಸಿಬ್ಬಂದಿಗಳ ವಸತಿ ಗೃಹಗಳ ಸುತ್ತಮುತ್ತ ಸೇರಿ ಒಟ್ಟು 40 ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸುವುದು ಅವಶ್ಯವಾಗಿರುತ್ತದೆ. ಈ ಸಂಬಂಧವಾಗಿ ಮೆ॥ ಎಸ್.ಎಸ್. ಮಾರ್ಕೇಟಿಂಗ್, ರಾಯಚೂರು ಇವರಿಂದ ಸಿಸಿ ಕ್ಯಾಮಾರಗಳನ್ನು ಅಳವಡಿಸಲು ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಕೋರಲಾಗಿತ್ತು. ಸದರಿಯವರು ಒಟ್ಟು 40 ಸಿಸಿ ಕ್ಯಾಮಾರಗಳನ್ನು ಅಳವಡಿಸಲು ರೂ. 9,16,350/- ಗಳ ಅಂದಾಜು ಪಟ್ಟಿಯನ್ನು ಸಲ್ಲಿಸಿರುತ್ತಾರೆ.

ಕಾರಣ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಸಿಬ್ಬಂದಿಗಳ ವಸತಿ ಗೃಹಗಳ ಸುತ್ತಮುತ್ತ ಒಟ್ಟು 40 ಸಿಸಿ ಕ್ಯಾಮಾರಗಳನ್ನು ಅಳವಡಿಸಲು ಹಾಗೂ ಸಿಸಿ ಕ್ಯಾಮಾರಗಳನ್ನು ಅಳವಡಿಸುವ ಸಂಬಂಧ ಸಲ್ಲುವ ಅಂದಾಜು ವೆಚ್ಚ ರೂ. 9,16,350/- ಗಳನ್ನು ನಿರ್ಭಯ ಯೋಜನೆ ಅಡಿಯಲ್ಲಿ ಬಿಡುಗಡೆ ಮಾಡಲಾಗುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಸಿಬ್ಬಂದಿಗಳ ವಸತಿ ಗೃಹಗಳ ಸುತ್ತಮುತ್ತ ಸುರಕ್ಷತೆ ಮತು ಭದ್ರತೆಯ ನಿಮಿತ್ತ ಅವಶ್ಯವಿರುವ ಒಟ್ಟು 40 ಸಿಸಿ ಕ್ಯಾಮಾರಗಳನ್ನು ಅಳವಡಿಸಲು ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಹಾಗೂ ಇದಕ್ಕೆ ತಗುಲುವ ಅಂದಾಜು ವೆಚ್ಚ ರೂ. 9,16,350/- ಗಳನ್ನು ನಿರ್ಭಯ ಯೋಜನೆ ಅಡಿಯಲ್ಲಿ ಪ್ರಸ್ತಾಪಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

Director
RIMS Raichur

| ವಿಷಯ ಸೂಚಿ ಸಂಖ್ಯೆ – 25 | ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸಂಚಿತ ವೇತನದ ಮೇಲೆ ಕಾರ್ಯನಿರ್ವಹಿಸುತ್ತಿರುವ ಹಿರಿಯ ಸ್ಥಾನಿಕರಿಗೆ ವೇತನವನ್ನು ಹೆಚ್ಚಳ ಮಾಡುವ ಬಗ್ಗೆ. |
|---|---|

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸರ್ಕಾರದಿಂದ ಒಟ್ಟು 12 ಹಿರಿಯ ಸ್ಥಾನಿಕ ಹುದ್ದೆಗಳು ಮಂಜೂರಾಗಿದ್ದು, ಸದರಿ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಹಿರಿಯ ಸ್ಥಾನಿಕರನ್ನು ಸಂಚಿತ ವೇತನದಲ್ಲಿ ನೇಮಕಾತಿ ಮಾಡಿಕೊಳ್ಳಲು ರೂ. 35,000/-ಗಳನ್ನು ನಿಗದಿಪಡಿಸಲಾಗಿರುತ್ತದೆ. ಆದರೆ ರೂ. 35,000/- ಗಳ ವೇತನವು ಕಡಿಮೆ ಆಗುವುದರಿಂದ ಅಭ್ಯರ್ಥಿಗಳು ಬರುತ್ತಿಲ್ಲ. ಪ್ರಸ್ತುತ ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಸ್ಥಾನಿಕರಿಗೆ ಸಂಚಿತ ವೇತನ (ಪ್ರತಿ ಮಾಹೆ) ರೂ. 50,000/- ಗಳನ್ನು ನಿಗದಿಪಡಿಸಿರುವುದರಿಂದ, ಓಪೆಕ್ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಲು ಯಾರು ಮುಂದೆ ಬರುತ್ತಿಲ್ಲ.

ಪ್ರಸ್ತುತ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಮಂಜೂರಾದ ಹುದ್ದೆಗಳಿಗೆ ಸರ್ಕಾರವು ಲೆಕ್ಕ ಶೀರ್ಷಿಕೆ 2210-01-110-2-37 ಅಡಿಯಲ್ಲಿ ಅನುದಾನವನ್ನು ಬಿಡುಗಡೆ ಮಾಡುತ್ತಿರುವುದರಿಂದ ಹೆಚ್ಚುವರಿ ಅನುದಾನದ ಅವಶ್ಯಕತೆಯಿರುವುದಿಲ್ಲ.

| ಕ್ರಮ ಸಂಖ್ಯೆ | ಹುದ್ದೆಯ ವಿವರ | ಮಂಜೂರಾದ ಒಟ್ಟು ಹುದ್ದೆಗಳು | ಪ್ರಸ್ತುತ ನಿಗದಿಪಡಿಸಿರುವ ಮಾಸಿಕ ಸಂಚಿತ ವೇತನ | ನಿಗದಿಪಡಿಸಬೇಕಾದ ಮಾಸಿಕ ಸಂಚಿತ ವೇತನ | ವ್ಯತ್ಯಾಸ ಮೊತ್ತ ಪ್ರತಿ ತಿಂಗಳಿಗೆ | ಪ್ರತಿ ತಿಂಗಳಿಗೆ (5 X 3) | ವಾರ್ಷಿಕವಾಗಿ ಸಲ್ಲುವ ವೆಚ್ಚ (7 X 12) |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | ಹಿರಿಯ ಸ್ಥಾನಿಕರು | 12 | ರೂ. 35,000/- | ರೂ. 50,000/- | ರೂ. 15,000/- | ರೂ. 1,80,000/- | ರೂ.21,60,000/- |

ಕಾರಣ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸರ್ಕಾರದಿಂದ ಮಂಜೂರಾದ ಒಟ್ಟು 12 ಹಿರಿಯ ಸ್ಥಾನಿಕರ ಹುದ್ದೆಗಳಿಗೆ ಎದುರಾಗಿ ಸಂಚಿತ ವೇತನ (ಪ್ರತಿ ಮಾಹೆ) ರೂ. 50,000/- ಗಳ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**ಸಭೆಯ ತೀರ್ಮಾನ :-**

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸರ್ಕಾರದಿಂದ ಮಂಜೂರಾದ ಒಟ್ಟು 12 ಹಿರಿಯ ಸ್ಥಾನಿಕರ ಹುದ್ದೆಗಳಿಗೆ ಈಗಾಗಲೇ ರಿಮ್ಸ್ ಸಂಸ್ಥೆಯಲ್ಲಿ ಪ್ರತಿ ಮಾಹೆ ಸಂಚಿತ ವೇತನ ರೂ. 50,000/- ಗಳನ್ನು ಪಾವತಿಸುತ್ತಿರುವಂತೆ ಓಪೆಕ್ ಆಸ್ಪತ್ರೆಯಲ್ಲಿನ ಹಿರಿಯ ಸ್ಥಾನಿಕರ ಹುದ್ದೆಗೂ ಸಹ ಪ್ರತಿ ಮಾಹೆ ರೂ. 50,000/- ಗಳ ಸಂಚಿತ ವೇತನವನ್ನು ನಿಗದಿಪಡಿಸಿಕೊಂಡು ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| ವಿಷಯ ಸೂಚಿ ಸಂಖ್ಯೆ – 26 | ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿನ ಒಟ್ಟು 5 ಐ.ಸಿ.ಯು ಗಳಿಗೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು ಅನುಮತಿ ನೀಡುವ ಕುರಿತು. |
|---|---|

*ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪೂರ್ಣ ಪ್ರಮಾಣದಲ್ಲಿ ಪ್ರಾರಂಭಿಸಲು ಈಗಾಗಲೇ ಎಲ್ಲಾ* ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಓಪೆಕ್ ಆಸ್ಪತ್ರೆಗೆ ಇನ್ನು ಹಲವು ಉಪಕರಣಗಳ ಅವಶ್ಯಕತೆಯಿರುತ್ತದೆ. ಈಗಾಗಲೇ 5 ಐ.ಸಿ.ಯುಗಳಲ್ಲಿ 2 ಐ.ಸಿ.ಯು ಗಳ ನವೀಕರಣ ಪೂರ್ಣಗೊಂಡಿದ್ದು ರೋಗಿಗಳಿಗೆ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಇನ್ನೂ 3 ಐ.ಸಿ.ಯು.ಗಳ ನವೀಕರಣ ಮಾಡಲು ಕಾರ್ಯಾದೇಶವನ್ನು ಕೆ.ಹೆಚ್.ಎಸ್.ಆರ್.ಡಿ.ಪಿ ಗೆ ನೀಡಲಾಗಿರುತ್ತದೆ. ಮಾನಿಟರ್‌ಗಳು, ಸಿರೆಂಜ್ ಪಂಪ್ ಮತ್ತು ನೆಬುಲೈಸರ್ ಉಪಕರಣಗಳನ್ನು ಖರೀದಿಸಲು ಅಂದಾಜು ರೂ. 35.00 ಲಕ್ಷಗಳಾಗುವ ಸಾಧ್ಯತೆಯಿರುತ್ತದೆ. ಸದರಿ ಉಪಕರಣಗಳನ್ನು ಖರೀದಿಸಲು ಓಪೆಕ್ ಆಸ್ಪತ್ರೆಯ ಲೆಕ್ಕ ಶೀರ್ಷಿಕೆ 2210-01-110-2-37 ಅಡಿಯಲ್ಲಿ ಅನುದಾನ ಲಭ್ಯವಿರುತ್ತದೆ.



Director
RIMS, Raichur

ಕಾರಣ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಮಾನಿಟರ್‌ಗಳು, ಸಿರಿಂಜ್ ಪಂಪಗಳು ಮತ್ತು ನೆಬುಲೈಸರ್‌ಗಳನ್ನು ನಿಯಮಾನುಸಾರ ಖರೀದಿಸಲು ಹಾಗೂ ಇದಕ್ಕೆ ತಗುಲುವ ಅಂದಾಜು ವೆಚ್ಚ ರೂ. 35.00 ಲಕ್ಷಗಳ ವೆಚ್ಚವನ್ನು ಓಪೆಕ್ ಆಸ್ಪತ್ರೆಯ ಲೆಕ್ಕ ಶಿರ್ಷಿಕೆ 2210-01-110-2-37 ಅಡಿಯಲ್ಲಿ ಲಭ್ಯವಿರುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

**<u>ಸಭೆಯ ತೀರ್ಮಾನ :-</u>**

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಮಾನಿಟರ್‌ಗಳು, ಸಿರಿಂಜ್ ಪಂಪಗಳು ಮತ್ತು ನೆಬುಲೈಸರ್‌ಗಳನ್ನು ನಿಯಮಾನುಸಾರ ಖರೀದಿಸಲು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಲು ಹಾಗೂ ಇದಕ್ಕೆ ತಗುಲುವ ಅಂದಾಜು ವೆಚ್ಚ ರೂ. 35.00 ಲಕ್ಷಗಳ ವೆಚ್ಚವನ್ನು ಓಪೆಕ್ ಆಸ್ಪತ್ರೆಯ ಲೆಕ್ಕ ಶಿರ್ಷಿಕೆ 2210-01-110-2-37 ಅಡಿಯಲ್ಲಿ ಲಭ್ಯವಿರುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ - 27 | ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಮೇನ್ ಗೇಟ್ ಮತ್ತು ಆಸ್ಪತ್ರೆಯಿಂದ ರಿಮ್ಸ್ ಸಂಸ್ಥೆಗೆ ಸಂಪರ್ಕ ಕಲ್ಪಿಸುವ ಗೇಟ್ ಗಳಲ್ಲಿ ಒಟ್ಟು 4 ಕಡೆ Cattle Trap ಗಳನ್ನು ಅಳವಡಿಸಲು ಅನುಮತಿ ನೀಡುವ ಕುರಿತು. |

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಮೇನ್ ಗೇಟ್ ಮತ್ತು ಓಪೆಕ್ ಆಸ್ಪತ್ರೆಯಿಂದ ರಿಮ್ಸ್ ಸಂಸ್ಥೆಗೆ ಸಂಪರ್ಕ ಕಲ್ಪಿಸುವ ಗೇಟ್‌ಗಳಲ್ಲಿ ಪ್ರತಿ ದಿನ ಆಕಳುಗಳು, ಕುರಿಗಳ ಹಿಂಡು ಆಸ್ಪತ್ರೆಯ ಮುಂದುಗಡೆ ಮತ್ತು ಸುತ್ತ ಮುತ್ತ ಓಡಾಡುತ್ತಿದ್ದು ಅಥವಾ ರಸ್ತ ಮಧ್ಯ ಎಲ್ಲೆಂದರಲ್ಲಿ ಮಲಗುತ್ತಿವೆ. ಆಸ್ಪತ್ರೆಯ ರೋಗಿಗಳನ್ನು ಅಂಬ್ಯೂಲೆನ್ಸ್ ವಾಹನದ ಮುಖಾಂತರ ಸ್ಥಳಾಂತರಿಸುವ ಸಮಯದಲ್ಲಿ ಮತ್ತು ಚಿಕಿತ್ಸೆಗೆ ಕರೆತರುವ ಸಮಯದಲ್ಲಿ ಆಕಳುಗಳು ಹಾಗೂ ಕುರಿಗಳು ಅಡ್ಡಾದಿಡ್ಡಿಯಾಗಿ ಬರುವುದರಿಂದ ಮತ್ತು ಮಲಗುವುದರಿಂದ ರೋಗಿಗಳನ್ನು ನಿಗದಿತ ಸಮಯದಲ್ಲಿ ಆಸ್ಪತ್ರೆಗೆ ತಲುಪಲು ತುಂಬಾ ಸಮಯವಾಗುತ್ತಿದೆ. ಇದರಿಂದಾಗಿ ರೋಗಿಗಳಿಗೆ ನಿಗದಿತ ಸಮಯದಲ್ಲಿ ಚಿಕಿತ್ಸೆ ನೀಡಲು ವಿಳಂಬವಾಗುತ್ತಿದೆ. ಈ ಹಿನ್ನಲೆಯಲ್ಲಿ ಆಸ್ಪತ್ರೆಯ ಒಟ್ಟು 4 ಕಡೆ Cattle Trap ಗಳನ್ನು ಅಳವಡಿಸಿದಲ್ಲಿ ಆಕಳುಗಳು, ಕುರಿಗಳ ಹಿಂಡನ್ನು ಆಸ್ಪತ್ರೆಯ ಒಳಗಡೆ ಪ್ರವೇಶಿಸುವುದನ್ನು ತಡೆಗಟ್ಟಬಹುದಾಗಿರುತ್ತದೆ. ಈ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ಇವರನ್ನು ಕೋರಲಾಗಿ ಸದರಿಯವರು Cattle Trap ನ್ನು ಅಂದಾಜು ರೂ. 4.00 ಲಕ್ಷಗಳು ಆಗುವ ಸಾಧ್ಯತೆಯಿರುತ್ತದೆಯಂದು ತಿಳಿಸಿರುತ್ತಾರೆ.

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಲೆಕ್ಕ ಶಿರ್ಷಿಕೆ 2210-01-110-2-37 ಅಡಿಯಲ್ಲಿ ಅನುದಾನ ಲಭ್ಯವಿರುತ್ತದೆ.

ಕಾರಣ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಒಟ್ಟು 4 ಕಡೆ Cattle Trap ಗಳನ್ನು ಅಳವಡಿಸಲು ಹಾಗೂ ಇದಕ್ಕೆ ತಗುಲವ ಅಂದಾಜು ರೂ. 4.00 ಲಕ್ಷಗಳ ವೆಚ್ಚವನ್ನು ಲೆಕ್ಕ ಶಿರ್ಷಿಕೆ 2210-01-110-2-37 ಅಡಿಯಲ್ಲಿ ಭರಿಸಲು ಹಾಗೂ ಸದರಿ ಕಾಮಗಾರಿಯನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ಇವರ ಮುಖಾಂತರ ಕೈಗೊಳ್ಳಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

Director
RIMS, Raichur

**ಸಭೆಯ ತೀರ್ಮಾನ :-**

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ಇವರ ಮುಖಾಂತರ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಒಟ್ಟು 4 ಕಡೆ Cattle Trap ಗಳನ್ನು ಅಂದಾಜು ರೂ. 4.00 ಲಕ್ಷಗಳ ವೆಚ್ಚದಲ್ಲಿ ಅಳವಡಿಸಲು ಅನುಮತಿಯನ್ನು ನೀಡಲಾಯಿತು. ಹಾಗೂ ರಿಮ್ಸ್ ಸಂಸ್ಥೆಯಲ್ಲಿಯು ಸಹ ಅವಶ್ಯವಿರುವ ಕಡೆ Cattle Trap ಗಳನ್ನು ಅಳವಡಿಸಿಕೊಳ್ಳಲು ಸದರಿಯವರಿಂದ ಅಂದಾಜು ಪಟ್ಟಿಯನ್ನು ಪಡೆದುಕೊಂಡು ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ನೀಡಲಾಯಿತು ಹಾಗೂ ಇದಕ್ಕೆ ತಗುಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210-01-110-2-37 ಅಡಿಯಲ್ಲಿ ಲಭ್ಯವಿರುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ - 28 | ಇತರ ವಿಷಯಗಳು ಅಧ್ಯಕ್ಷರ ಅಪ್ಪಣೆ ಮೇರೆಗೆ |

1) ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದಿರುವ ವೈದ್ಯರುಗಳಿಗೆ ಗ್ರಾಚ್ಯೂಟಿ ಮಂಜೂರು ಮಾಡುವ ಬಗ್ಗೆ.

**ಸಭೆಯ ತೀರ್ಮಾನ :-**

ರಾಜ್ಯದ ಸ್ವಾಯತ್ತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ನಿವೃತ್ತಿಯ ನಂತರ ಗ್ರಾಚ್ಯೂಟಿಯನ್ನು ಮಂಜೂರು ಮಾಡಲು ಅವಕಾಶವಿಲ್ಲವಾದ್ದರಿಂದ ಸದರಿ ಪ್ರಸ್ತಾವನೆಯನ್ನು ಆರ್ಥಿಕ ಸಮಿತಿಯಿಂದ ತಿರಸ್ಕರಿಸಲಾಯಿತು.

2) ರಿಮ್ಸ್ ಸಂಸ್ಥೆಯಲ್ಲಿರುವ ಎಲ್ಲಾ ಜನರೇಟರ್‌ಗಳನ್ನು ಈಗಾಗಲೇ ಖರೀದಿಸಲಾಗಿರುವ ಕಂಪನಿಯಿಂದಲೇ ಕೆ.ಟಿ.ಪಿ.ಪಿ ಕಾಯ್ದೆ 4 ಸಿ ಅಡಿಯಲ್ಲಿ ಸಿ.ಎಂ.ಸಿ ನಿರ್ವಹಣೆಯನ್ನು ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ.

**ಸಭೆಯ ತೀರ್ಮಾನ :-**

ಕೆ.ಟಿ.ಪಿ.ಪಿ ಕಾಯ್ದೆ 4 ಸಿ ಅಡಿಯಲ್ಲಿ ರಿಮ್ಸ್ ಸಂಸ್ಥೆಯಲ್ಲಿರುವ ಎಲ್ಲಾ ಜನರೇಟರ್‌ಗಳ ವಾರ್ಷಿಕ ಸಿ.ಎಂ.ಸಿ ನಿರ್ವಹಣೆಯನ್ನು ಜನರೇಟರ್ ಖರೀದಿಸಲಾಗಿರುವ ಕಂಪನಿಯಿಂದಲೇ ಕೈಗೊಳ್ಳಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

3) ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ 2019-2020 ರ ಸಾಲಿನಲ್ಲಿ Onocology ವಿಂಗ್‌ನ್ನು ಪ್ರಾರಂಭಿಸುವ ಬಗ್ಗೆ.

**ಸಭೆಯ ತೀರ್ಮಾನ :-**

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ 2019-2020 ರ ಸಾಲಿನಲ್ಲಿ Onøcology ವಿಂಗ್‌ನ್ನು ಪ್ರಾರಂಬಿಸಲು ಅಗತ್ಯ ಪ್ರಸ್ತಾವನೆಯನ್ನು ಸಿದ್ದಪಡಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಆರ್ಥಿಕ ಸಮಿತಿ ಸಭೆಯು ವಿಶೇಷಾಧಿಕಾರಿಗಳು, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರಿಗೆ ಸೂಚಿಸಲಾಯಿತು.

Director
RIMS, Raichur

4) ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಆವರಣದಲ್ಲಿರುವ ಸಿಬ್ಬಂದಿ ವಸತಿ ಗೃಹಗಳಿಗೆ ಮೆಶ್ (Mesh) ನ್ನು ಅಳವಡಿಸುವ ಬಗ್ಗೆ.

**ಸಭೆಯ ತೀರ್ಮಾನ :-**

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಆವರಣದಲ್ಲಿರುವ ಎಲ್ಲಾ ಸಿಬ್ಬಂದಿ ವಸತಿ ಗೃಹಗಳಿಗೆ ಮೆಶ್ (Mesh) ನ್ನು ಅಳವಡಿಸುವ ಸಂಬಂಧ ಕ್ಯಾಷುಟೆಕ್ ಅಥವಾ ಕೆ.ಹೆಚ್.ಎಸ್.ಆರ್.ಡಿ.ಪಿ, ರಾಯಚೂರು ಇವರಿಂದ ಅಂದಾಜು ಪಟ್ಟಿಯನ್ನು ಪಡೆದುಕೊಂಡು ಮೆಶ್‌ನ್ನು ಅಳವಡಿಸಲು ಅನುಮೋದನೆ ನೀಡಲಾಯಿತು.

5) ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಖಾಲಿಯಿರುವ ಹುದ್ದೆಗಳಿಗೆ ಕನ್ಸಲ್ಟೆಂಟ್ ಮಾದರಿಯಲ್ಲಿ ಸೇವೆಯನ್ನು ಪಡೆಯುವ ಬಗ್ಗೆ.

**ಸಭೆಯ ತೀರ್ಮಾನ :-**

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಇನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಖಾಲಿಯಿರುವ ಎಲ್ಲಾ ಬೋಧಕ ಹುದ್ದೆಗಳಿಗೆ ಕನ್ಸಲ್ಟೆಂಟ್ ಮಾದರಿಯಲ್ಲಿ ಸೇವೆಯನ್ನು ಪಡೆಯಲು ಅಗತ್ಯವಿರುವ ಪ್ರಸ್ತಾವನೆಯನ್ನು ಜರೂರಾಗಿ ಸರ್ಕಾರಕ್ಕೆ ಸಲ್ಲಿಸಲು ವಿಶೇಷಾಧಿಕಾರಿಗಳು, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರಿಗೆ ಸೂಚಿಸಲಾಯಿತು.

6) ರಿಮ್ಸ್ ಸಂಸ್ಥೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಖಾಲಿಯಿರುವ ಬೋಧಕ ಸಿಬ್ಬಂದಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

**ಸಭೆಯ ತೀರ್ಮಾನ :-**

ರಿಮ್ಸ್ ಸಂಸ್ಥೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಖಾಲಿಯಿರುವ ಎಲ್ಲಾ ಬೋಧಕ ಸಿಬ್ಬಂದಿ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಆರ್ಥಿಕ ಸಮಿತಿ ಸಭೆಯು ಸೂಚಿಸಲಾಯಿತು. ಹಾಗೂ ಒಂದು ವೇಳೆ ಹುದ್ದೆಗಳು ಭರ್ತಿಯಾಗದೇ ಯಿದ್ದಲ್ಲಿ ಪ್ರತಿ ನಾಲ್ಕು ತಿಂಗಳಿಗೊಮ್ಮೆ ನೇರ ಸಂದರ್ಶನದ ಮೂಲಕ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳುವಂತೆ ಆರ್ಥಿಕ ಸಮಿತಿ ಸಭೆಯು ಸೂಚಿಸಲಾಯಿತು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಡಾ.ಕವಿತಾ ಪಾಟೀಲ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ವಿ.ಮಂಜುಳ), ಭಾ.ಆ.ಸೇ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಬೆಂಗಳೂರು